ಮಾನ್ಯ ಅಧ್ಯಕ್ಷರು, ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:18.03.2021ರಂದು ಪೂರ್ವಾಹ್ನ 11.30 ಘಂಟೆಗೆ ನಡೆದ ಪ್ರಾಧಿಕಾರದ 68ನೇ ಸಾಮಾನ್ಯ ಸಭೆಯ ನಡಾವಳಿ

ಕ್ರಮ ಸಂಖ್ಯೆ	ಹಾಜರಿದ್ದ ಸದಸ್ಯರು	
1	ಮಾನ್ಯ ಅಧ್ಯಕ್ಷರು, ಬಿಎಂಐಸಿಎಪಿಎ	ಅಧ್ಯಕ್ಷರು
2	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿಎಂಐಸಿಎಪಿಎ. ಬೆಂಗಳೂರು.	ಸದಸ್ಯ ಕಾರ್ಯದರ್ಶಿಗಳು
3	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು	ಸದಸ್ಯರು
	ಸದಸ್ಯರ ಪರವಾಗಿ ಹಾಜರಿದ್ದ ಅಧಿಕಾರಿಗಳು	
4	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು	ಸದಸ್ಯರು
5	ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು	ಸದಸ್ಯರು
6	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ. ಬೆಂಗಳೂರು	ಸದಸ್ಯರು
7	ರಾಮನಗರ ಮುನಿಸಿಪಲ್ ಕಮಿಷನರ್, ರಾಮನಗರ, ರಾಮನಗರ ಜಿಲ್ಲೆ	ಸದಸ್ಯರು
	ಹಾಜರಿದ್ದ ವಿಶೇಷ ಆಹ್ವಾನಿತರು	
8	ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಬೆಂಗಳೂರು.	
9	ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.	
10	ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.	
	ಗೈರು ಹಾಜರಾದ ಸದಸ್ಯರು	
11	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.	ಸದಸ್ಯರು
12	ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು	ಸದಸ್ಯರು
13	ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.	ಸದಸ್ಯರು
14	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಮನಗರ ಜಿಲ್ಲೆ, ರಾಮನಗರ	ಸದಸ್ಯರು
15	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ	ಸದಸ್ಯರು
16	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು	ಸದಸ್ಯರು
17	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು	ಸದಸ್ಯರು
	ಗೈರು ಹಾಜರಾದ ವಿಶೇಷ ಆಹ್ವಾನಿತರು	
18	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ	
19	ಸಮನ್ವಯ ಅಧಿಕಾರಿಗಳು, ಬಿಎಂಐಸಿಪಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.	

1) ದಿನಾಂಕ:06.01.2021ರಂದು ನಡೆದ ಪ್ರಾಧಿಕಾರದ 67ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವುದು.

*****

ದಿನಾಂಕ:06.01.2021ರಂದು ನಡೆದ ಪ್ರಾಧಿಕಾರದ 67ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಕುರಿತು.

ತೀರ್ಮಾನ:

ದಿನಾಂಕ:06.01.2021ರಂದು ನಡೆದ ಪ್ರಾಧಿಕಾರದ 67ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ಓದಿ ದೃಢೀಕರಿಸಲಾಯಿತು.

2) ದಿನಾಂಕ: 06.01.2021ರಂದು ನಡೆದ ಪ್ರಾಧಿಕಾರದ 67ನೇ ಸಾಮಾನ್ಯ ಸಭೆಯ ನಡಾವಳಿಯಂತೆ ವಹಿಸಲಾದ ಕ್ರಮದ ಸಂಬಂಧ ಪಾಲನಾ ವರದಿ.

*****

ದಿನಾಂಕ: 06.01.2021ರಂದು ನಡೆದ ಪ್ರಾಧಿಕಾರದ 67ನೇ ಸಾಮಾನ್ಯ ಸಭೆಯ ನಡಾವಳಿಯಂತೆ ವಹಿಸಲಾದ ಕ್ರಮಗಳ ಕುರಿತು ಪಾಲನಾ ವರದಿಯನ್ನು ಈ ಕೆಳಕಂಡಂತೆ ಮಂಡಿಸಿದೆ.

ವಿಷಯ ಸಂಖ್ಯೆ	ವಿಷಯ	ತೆಗೆದುಕೊಂಡ ಕ್ರಮ
II	**ತಾಂತ್ರಿಕ ಶಾಖೆ**	
III	**ವಿನ್ಯಾಸ ಅನುಮೋದನೆ ಪ್ರಕರಣಗಳು**	
1	ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5ರ 0ಎ–32ಗು, ಸರ್ವೆ ಸಂಖ್ಯೆ:31/1ರ 03ಎ–35ಗು, ಸರ್ವೆ ಸಂಖ್ಯೆ:31/2ರ 03ಎ–10ಗು ಮತ್ತು ದೊಡ್ಡತೋಗುರು ಗ್ರಾಮದ ಸರ್ವೆ ಸಂಖ್ಯೆ:132ರ 01ಎ–09ಗು ರಲ್ಲಿ 0ಎ–02ಗು ಕಾಲುದಾರಿ ಖರಾಬು ಹೊರತುಪಡಿಸಿ ಉಳಿಕೆ 01ಎ–07ಗು ಒಟ್ಟು 09ಎ–04ಗು ಜಮೀನಿನ ಪೈಕಿ ಸ್ಥಳದಲ್ಲಿ ಲಭ್ಯವಿರುವ 08ಎ–37ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಗೋಕುಲ್ ಡೆವಲಪರ್ಸ್ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಹೆಗ್ಗಡೆಗೆರೆ ಗ್ರಾಮದ ಸ.ನಂ:28/3ರ 0ಎ–18½ಗು, 29/1ರ 0ಎ–05ಗು, 29/2ರ 0ಎ–29ಗು, 29/3ರ 0ಎ–13ಗು, 29/4ರ 01ಎ–39ಗು, 30/1ರ 01ಎ–9½ಗು, 30/2ರ 0ಎ–26ಗು, 30/3(ಹೊ.ನಂ:30/4)ರ 0ಎ–03ಗು, 31/4 (ಹೊ.ನಂ.31/8)ರ 0ಎ–08ಗು, 31/4ರ 0ಎ–08ಗು, 31/5ರ 0ಎ–13ಗು, 32/2ರ 0ಎ–07ಗು, 32/3ರ 0ಎ–24ಗು, 32/4ರ 0ಎ–24ಗು, 32/1(ಹೊ.ನಂ.32/8)ರ 0ಎ–15ಗು, 32/5ರ 0ಎ–04ಗು, 32/6ರ 0ಎ–03ಗು, 32/7ರ 0ಎ–24ಗು, 33/1ರ 0ಎ–6½ಗು, 33/2ರ 0ಎ–12ಗು, 33/3ರ 0ಎ–04ಗು, 33/4ರ 0ಎ–03ಗು, 33/5ರ 0ಎ–27ಗು (02ಗುಂಟೆ 'ಎ' ಖರಾಬು ಸೇರಿ) ಮತ್ತು ಸ.ನಂ33/8ರ 0ಎ–10ಗು ಒಟ್ಟು 10ಎ–15½ಗು ಪೈಕಿ ನಾಲಾಗೆ ಹೊಂದಿಕೊಂಡಂತೆ ಒತ್ತುವರಿಯಾಗಿರುವ 5¾ಗುಂಟೆ ಹಾಗೂ 05ಗುಂಟೆ 'ಬಿ' ಖರಾಬು ಹೊರತುಪಡಿಸಿ ಉಳಿಕೆ ಒಟ್ಟು 10ಎ–4¾ಗುಂಟೆ ಜಮೀನಿಗೆ ನೀಡಿರುವ ಪರಿಷ್ಕೃತ	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗುತ್ತಿದೆ

	ವಸತಿ ವಿನ್ಯಾಸದಲ್ಲಿನ 2ನೇ ಹಂತದ ಶೇ. 30 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಕೋರಿ ಅಧ್ಯಕ್ಷರು ಎಸ್.ಕೆ.ಎಫ್. ಗೃಹ ನಿರ್ಮಾಣ ಸಹಕಾರ ಸಂಘ ನಿ. ರವರು ಸಲ್ಲಿಸಿರುವ ಮನವಿ ಕುರಿತು.	
3	ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ: 20/2ರ 04ಎ–19ಗು, ಸರ್ವೆ ಸಂಖ್ಯೆ:23ರ 04ಎ–10ಗು, ಸರ್ವೆ ಸಂಖ್ಯೆ:24ರ 08ಎ–09ಗು, ಸರ್ವೆ ಸಂಖ್ಯೆ:25/1ರ 02ಎ–01½ಗು ಮತ್ತು ಸರ್ವೆ ಸಂಖ್ಯೆ:25/2ರ 02ಎ–01½ಗು ಒಟ್ಟು 21ಎ–01ಗು ವಿಸ್ತೀರ್ಣದ ಜಮೀನಿಗೆ ನೀಡಿರುವ ವಸತಿ ವಿನ್ಯಾಸ ಅನುಮೋದನೆಯನ್ನು ನವೀಕರಿಸಲು ಕೋರಿರುವ ಬಗ್ಗೆ.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
IV	**ಇತರೆ ವಿಷಯಗಳು**	
1	ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಅರಕೆರೆ ಹೋಬಳಿ, ಮುಂಡುಗದೊರೆ ಗ್ರಾಮದ ಸರ್ವೆ ಸಂಖ್ಯೆ:388ರ 01ಎ–10ಗು ಮತ್ತು 390ರ 01ಎ–10ಗು ಒಟ್ಟು 02ಎ–20ಗು ವಿಸ್ತೀರ್ಣದ ಜಮೀನನ್ನು Quarrying of Gravel, Sand, Clay or Stone ಉದ್ದೇಶಕ್ಕಾಗಿ ಆನ್‌ಲೈನ್ ಮುಖಾಂತರ ಭೂ ಪರಿವರ್ತನೆ ಕೋರಿ ಶ್ರೀ ಸಂತಾನ್ ಜೇಕಬ್ ಮತ್ತು ಶ್ರೀಮತಿ ಕೆ.ಎಂ.ಫಿಲೋಮಿನಾ ಮ್ಯಾಥ್ಯೂ ಇವರು ಸಲ್ಲಿಸಿರುವ ಮನವಿಗೆ ಅಭಿಪ್ರಾಯ ನೀಡಿರುವುದನ್ನು ಸ್ಥಿರೀಕರಿಸಿರುವ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ಪ್ರಾಧಿಕಾರದಲ್ಲಿ ಸಂಗ್ರಹವಾಗಿರುವ ಕೆರೆ ಸಂರಕ್ಷಣಾ ಶುಲ್ಕದಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
3	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:101ರ 04ಎ–07ಗು ಪೈಕಿ 03ಎ–33ಗು ಮತ್ತು ಸರ್ವೆ ಸಂಖ್ಯೆ:104/1 (ಹಳೆ ಸರ್ವೆ ಸಂಖ್ಯೆ:104)ರ 02ಎ–26ಗು ಒಟ್ಟು 06ಎ–19ಗು ವಿಸ್ತೀರ್ಣದ ಜಮೀನಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಿರುವ ಸಂಬಂಧ ಪಾವತಿಸಿಕೊಂಡಿರುವ ಶುಲ್ಕದಲ್ಲಿ ಹೆಚ್ಚುವರಿ ಶುಲ್ಕವನ್ನು ಹಿಂದಿರುಗಿಸುವಂತೆ ಮೆ॥ ರೋಲ್ಯಾಂಡ್ ಮೆಡೋಸ್ ಎಸ್ಟೇಟ್ ಪ್ರೈ.ಲಿ ರವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
V	**ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳು**	
1	ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:810/1ರ 03ಎ–04ಗು ವಿಸ್ತೀರ್ಣದ ಜಮೀನಿಗೆ ಪರಿಷ್ಕೃತ ವಸತಿ ವಿನ್ಯಾಸ ಅನುಮೋದನೆ ಕೋರಿ ಶ್ರೀ ಎಂ.ರಾಜು ಬಿನ್ ಶ್ರೀಮತಿ ಜಯಲಕ್ಷ್ಮಮ್ಮ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಹಿರೇಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:15/2ರ 0ಎ–20ಗು, 15/3ರ 0ಎ–10ಗು, 15/4ರ 0ಎ–20ಗು, 16/2ರ 0ಎ–20ಗು, 16/3ರ 0ಎ–27ಗು, 16/4ರ 0ಎ–07ಗು, 16/5ರ 0ಎ–07ಗು, 16/6ರ 0ಎ–17ಗು ಮತ್ತು ಸರ್ವೆ ಸಂಖ್ಯೆ16/7ರ 0ಎ–07ಗು ಒಟ್ಟು 03ಎ–15ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೈಕೋ	

	ಕಾರ್ಮಿಕರ ಬಳಗದ ವಸತಿ ಸಹಕಾರ ಸಂಘ ನಿಯಮಿತ(ರಿ) ಇವರು ಸಲ್ಲಿಸಿರುವ ಮನವಿ ಕುರಿತು.	
3	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 177/2ರ 0ಎ–20ಗು, 177/4ರ 01ಎಕರೆ, 177/5ರ 01ಎಕರೆ, 178/2ರ 01ಎ–26ಗು, 181/1ರ 01ಎ–21ಗು, 181/2ರ 0ಎ–30ಗು ಒಟ್ಟು 06ಎ–17ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೈಕೋ ಕಾರ್ಮಿಕರ ಬಳಗದ ವಸತಿ ಸಹಕಾರ ಸಂಘ ನಿಯಮಿತ(ರಿ) ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ

ತೀರ್ಮಾನ:

ಪ್ರಾಧಿಕಾರದ 67ನೇ ಸಭೆಯ ನಿರ್ಣಯದಂತೆ ಕಛೇರಿಯಿಂದ ತೆಗೆದುಕೊಂಡ ಕ್ರಮವನ್ನು ಪರಿಶೀಲಿಸಿ ಅಂಗೀಕರಿಸಲಾಯಿತು.

I ಆಡಳಿತ ಶಾಖೆ ಪ್ರಸ್ತಾವನೆಗಳು

1) ಬಿಎಂಐಸಿ ಯೋಜನಾ ಪ್ರಾಧಿಕಾರದ 2021ನೇ ಜನವರಿ ಮತ್ತು ಫೆಬ್ರವರಿ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ಪರಿಶೀಲನೆ ಬಗ್ಗೆ.

*****

ಪ್ರಾಧಿಕಾರದ 2021ನೇ ಜನವರಿ ಮತ್ತು ಫೆಬ್ರವರಿ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ಮಾಹಿತಿಯನ್ನು (ಅನುಬಂಧ–1)ರಲ್ಲಿ ಇರಿಸಿ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

ತೀರ್ಮಾನ:–

ಪ್ರಾಧಿಕಾರದ ಜನವರಿ–2021 ಮತ್ತು ಫೆಬ್ರವರಿ–2021ರ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ವಿವರಗಳನ್ನು (ಅನುಬಂಧ–1)ರನ್ವಯ ಸಭೆಯು ಪರಿಶೀಲಿಸಿ ಅಂಗೀಕರಿಸಲಾಯಿತು.

2) ಪ್ರಾಧಿಕಾರದ 2021–22ನೇ ಸಾಲಿನ ಆಯವ್ಯಯಕ್ಕೆ (ಬಜೆಟ್) ಅನುಮೋದನೆ ಪಡೆಯುವ ಬಗ್ಗೆ.

******

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 68ಬಿ ರನ್ವಯ 2021–22ನೇ ಸಾಲಿನ ಆರ್ಥಿಕ ವರ್ಷಕ್ಕೆ ಆಯವ್ಯಯವನ್ನು ತಯಾರಿಸಿ ಸರ್ಕಾರದ ಅನುಮೋದನೆ ಹಾಗೂ ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ಸಲ್ಲಿಸಬೇಕಾಗಿರುತ್ತದೆ. ಹಾಗಾಗಿ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳ 1965ರ ನಿಯಮ 22ರಂತೆ ಪ್ರಾಧಿಕಾರದ 2021–22ನೇ ಸಾಲಿನ ಆಯವ್ಯಯವನ್ನು ನಿಗಧಿತ ನಮೂನೆ–4ರಲ್ಲಿ ತಯಾರಿಸಲಾಗಿದೆ. ಸದರಿ ಆಯವ್ಯಯದ ವಿವರಗಳನ್ನು ಚರ್ಚೆ ಹಾಗೂ ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಲಾಗಿದೆ.

ತೀರ್ಮಾನ:–

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತುತ ಪ್ರಾಧಿಕಾರದ 2021–22ನೇ ಸಾಲಿನ ಆಯವ್ಯಯವನ್ನು ನಿಗಧಿತ ನಮೂನೆಯಲ್ಲಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಹಾಗೂ ಯಥಾ ಪ್ರತಿಯನ್ನು ರಾಜ್ಯ ನಗರ ಯೋಜನಾ ಮಂಡಳಿಗೂ ಸಹ ಸಲ್ಲಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು.

3) ಬಿಎಂಐಸಿಎ ಯೋಜನಾ ಪ್ರಾಧಿಕಾರದ ಕಛೇರಿಯ ಬಾಡಿಗೆ ಅವಧಿಯು ದಿನಾಂಕ:31.03.2021ರಂದು ಮುಕ್ತಾಯಗೊಳ್ಳುತ್ತಿದ್ದು, ಮುಂದಿನ 02 ವರ್ಷಗಳ ಅವಧಿಗೆ ಮುಂದುವರೆಸುವ ಮತ್ತು ಹೆಚ್ಚುವರಿ ಸ್ಥಳಾವಕಾಶವನ್ನು ಪಡೆಯುವ ಬಗ್ಗೆ.

******

ಬಿಎಂಐಸಿಎ ಯೋಜನಾ ಪ್ರಾಧಿಕಾರವು ಈ ಹಿಂದೆ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಬಹುಮಹಡಿ ಕಟ್ಟಡಗಳ 2ನೇ ಮಹಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಕಟ್ಟಡದಿಂದ ಬಿಎಂಐಸಿಎಪಿಎ ಕಛೇರಿಯನ್ನು ರೇಸ್‌ಕೋರ್ಸ್ ರಸ್ತೆಯಲ್ಲಿರುವ ಶ್ರೀ ಆರ್.ಜೈ ಪ್ರಸಾದ್ ಇವರ ಮಾಲೀಕತ್ವದ ಕಟ್ಟಡಕ್ಕೆ ಸ್ಥಳಾಂತರಿಸಿ ಪ್ರಸ್ತುತ ಇದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ.

ಸಹಾಯಕ ಕಾರ್ಯಪಾಲಕ ಇಂಜನಿಯರ್, ನಂ:3 ಕಟ್ಟಡಗಳ ಉಪವಿಭಾಗ, ಬಹುಮಹಡಿ ಕಟ್ಟಡ, ಬೆಂಗಳೂರು ಇವರು ಸದರಿ ಕಟ್ಟಡವನ್ನು ಪರಿವೀಕ್ಷಿಸಿ ಕಟ್ಟಡಗಳು ಹಾಗೂ ನಿವೇಶನಗಳ ಪ್ರಸ್ತುತ ಮಾರುಕಟ್ಟೆ ದರಗಳಿಗೆ ಸಂಬಂಧಿಸಿದಂತೆ ನೊಂದಣಿ ಮತ್ತು ಮುದ್ರಾಂಕ ಇಲಾಖೆಯು ದಿನಾಂಕ:07.10.2014ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ:ಸಿಎಸಿ/01/14–15ರಂತೆ ಹಾಗೂ ಲೋಕೋಪಯೋಗಿ ಇಲಾಖಾ ನಿಯಮಾವಳಿಯನ್ವಯ ಸದರಿ ಕಟ್ಟಡದ ಮಾಹೆಯಾನ ಬಾಡಿಗೆಗೆ ಸಂಬಂಧಪಟ್ಟಂತೆ ಚದುರ ಅಡಿಗೆ ರೂ.73/–ಗಳನ್ನು ನಿಗಧಿಪಡಿಸಿ 2600 ಚ.ಅ ಪ್ರದೇಶಕ್ಕೆ ಮಾಹೆಯಾನ ರೂ.1,89,659/–ನ್ನು ನಿಗಧಿಪಡಿಸಿರುತ್ತಾರೆ.

ಅದರಂತೆ, ಬಿಎಂಐಸಿಎ ಯೋಜನಾ ಪ್ರಾಧಿಕಾರದ ಮಾನ್ಯ ಅಧ್ಯಕ್ಷರು ಮತ್ತು ಸದಸ್ಯ–ಕಾರ್ಯದರ್ಶಿಗಳು, ಕಟ್ಟಡದ ಮಾಲೀಕರ ಜೊತೆ ಚರ್ಚಿಸಿ, 2600 ಚದುರ ಅಡಿಗೆ ರೂ.55/–ರಂತೆ ರೂ.1,43,000/– ಹಾಗೂ ಸರ್ವೀಸ್ ಟ್ಯಾಕ್ಸ್ ಮತ್ತು ಚದುರಡಿ 1 ಕ್ಕೆ ರೂ.5/–ರಂತೆ ನಿರ್ವಹಣಾ ಶುಲ್ಕ ಸೇರಿದಂತೆ ಬಾಡಿಗೆ ನಿಗಧಿಪಡಿಸಿ ಕರಾರು ಒಪ್ಪಂದ ಪತ್ರವನ್ನು ಮಾಡಿಕೊಳ್ಳಲಾಗಿದ್ದು, ಸದರಿ ಕಟ್ಟಡಕ್ಕೆ ಮುಂಗಡ ಹಣವಾಗಿ ರೂ.10,00000/–ಗಳನ್ನು ದಿನಾಂಕ:06.04.2015ರಂದು ಕಟ್ಟಡ ಮಾಲೀಕರಿಗೆ ನೀಡಲಾಗಿದೆ. ಮುಂಗಡ ಹಣ ನೀಡಿ ಕಛೇರಿ ಬಾಡಿಗೆಗೆ ಪಡೆದಿರುವ ಸಂಬಂಧ ಹಾಗೂ ಕರಾರು ಪತ್ರ ಮಾಡಿಕೊಂಡಿರುವ ಸಂಬಂಧ ವಿಷಯವನ್ನು ಪ್ರಾಧಿಕಾರದ 44ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಸಭೆಯ ಅನುಮೋದನೆ ಪಡೆಯಲಾಗಿದೆ.

ಈ ಕಛೇರಿಯ ಕಟ್ಟಡ ಮಾಲೀಕರೊಡನೆ ಮಾಡಿಕೊಂಡಿರುವ ಒಡಂಬಡಿಕೆ ಪತ್ರದ ಅಂಶ 3.6ರಂತೆ ವಾರ್ಷಿಕ ಶೇ.5% ಗಳ ಬಾಡಿಗೆ ಹೆಚ್ಚಳಕ್ಕೆ ಅವಕಾಶ ಕಲ್ಪಿಸಿದೆ. ಇದೇ ಒಡಂಬಡಿಕೆಯ ಅಂಶ 3.1ರಂತೆ ಕಛೇರಿಯ ಬಾಡಿಗೆ ಒಪ್ಪಂದದ ಕರಾರು ಅವಧಿಯು ದಿನಾಂಕ:01.05.2015 ರಿಂದ 04 ವರ್ಷಗಳ ಅವಧಿ ಉಳ್ಳದ್ದಾಗಿರುತ್ತದೆ. ಒಡಂಬಡಿಕೆಯ ಅಂಶ 3.1ರಲ್ಲಿ ಮುಂದುವರೆದಂತೆ ಕಟ್ಟಡದ ಮಾಲೀಕರು ಒಪ್ಪಿದಲ್ಲಿ ಪುನಃ 02 ವರ್ಷಗಳ ಅವಧಿಗೆ ಬಾಡಿಗೆ ಅವಧಿಯನ್ನು ನವೀಕರಿಸಲು ಅವಕಾಶವಿರುತ್ತದೆ.

ಅದರಂತೆ, ಬಿಎಂಐಸಿಎ ಯೋಜನಾ ಪ್ರಾಧಿಕಾರದ 62ನೇ ಸಾಮಾನ್ಯ ಸಭೆಯಲ್ಲಿ **ದಿನಾಂಕ:30.04.2019ರಂದು ಬಾಡಿಗೆ ಅವಧಿಯು ಅಂತ್ಯಗೊಂಡಿದ್ದರಿಂದ,** ಮುಂದಿನ 2ವರ್ಷಗಳ ಕಾಲ ಮುಂದುವರೆಸುವ ಬಗ್ಗೆ ಸಭೆಯು ಕೂಲಂಕುಷವಾಗಿ ಚರ್ಚಿಸಿ, ಹಾಲಿ ಇರುವ ಕಟ್ಟಡವನ್ನು ಕಛೇರಿಗೆ ಪೂರಕವಾಗಿ ನವೀಕರಣ ಮಾಡಿಸಿರುವುದರಿಂದ, ಹಾಲಿ ಕಟ್ಟಡದಲ್ಲಿ ಕಛೇರಿಯನ್ನು ಮುಂದುವರೆಯುವ ಬಗ್ಗೆ ಕಟ್ಟಡದ ಮಾಲೀಕರೊಂದಿಗೆ ಚರ್ಚಿಸುವಂತೆ ಕಟ್ಟಡದ ಮಾಲೀಕರ ಅಭಿಪ್ರಾಯ ಹಾಗೂ ಒಪ್ಪಂದ ಪತ್ರದನ್ವಯ ಮುಂದುವರೆಯಬಹುದಾದ ಅವಧಿಗೆ ಮಾಸಿಕ ಬಾಡಿಗೆ ಕೋರಿಕೆ ಸಂಬಂಧ ಕಟ್ಟಡದ ಮಾಲೀಕರಿಂದ ಲಿಖಿತವಾಗಿ ಮಾಹಿತಿ ಪಡೆದು, ಹಾಲಿ ಇರುವ ಬಾಡಿಗೆ ಕಟ್ಟಡದಲ್ಲಿಯೇ ಮುಂದುವರೆಸುವ ಬಗ್ಗೆ ಪರಿಶೀಲಿಸಲು ಸದಸ್ಯ–ಕಾರ್ಯದರ್ಶಿಗಳಿಗೆ ಸಭೆಯು ಸೂಚಿಸಿತು. ಈ ಸಂಬಂಧ ಮಾನ್ಯ ಅಧ್ಯಕ್ಷರಿಂದ ಕಡತದಲ್ಲಿ ಅನುಮೋದನೆ ಪಡೆದು ಕ್ರಮವಹಿಸುವಂತೆ ಸೂಚಿಸಿ ನಿರ್ಣಯಿಸಲಾಯಿತು. ಒಂದು ವೇಳೆ ಹಾಲಿ ಕಟ್ಟಡದಲ್ಲಿ ಮುಂದುವರೆಯುವುದಾದಲ್ಲಿ ಒಪ್ಪಂದ ಕರಾರು ಪತ್ರ ನವೀಕರಣ ಆಗುವ ಸಮಯದಲ್ಲಿ ಪ್ರಾಧಿಕಾರದ ವಕೀಲರ ಮುಖೇನ ಸಂಬಂಧಿಸಿದ ಒಪ್ಪಂದ

ಕರಾರು ಪತ್ರವನ್ನು ಮಾಡಿಸಲು ಹಾಗೂ ಈ ಸಂಬಂಧ ತಗಲುವ ವಕೀಲರ ಫೀ ಮತ್ತಿತರ ಶುಲ್ಕಗಳನ್ನು ಪ್ರಾಧಿಕಾರದಿಂದ ಭರಿಸಲೂ ಸಭೆಯಲ್ಲಿ ತೀರ್ಮಾನಿಸಲಾಯಿತು. ಸಭೆಯ ತೀಮಾನದಂತೆ, **ಬಾಡಿಗೆ ಕರಾರು ಒಪ್ಪಂದದಂತೆ ದಿನಾಂಕ:30.04.2019 ರಿಂದ ಮುಂದಿನ 2 ವರ್ಷದ ವರೆಗೆ ಅಂದರೆ 31.03.2021ರವರೆಗೆ ಬಾಡಿಗೆ ರೂ. 1,57,658/– ಹಾಗೂ ನಿರ್ವಹಣಾ ವೆಚ್ಚ ರೂ. 14,333/– ಮತ್ತು ಸಿಜಿಎಸ್‌ಟಿ ಮತ್ತು ಎಸ್‌ಜಿಎಸ್‌ಟಿ ಪ್ರತ್ಯೇಕವಾಗಿ ನಿಗಧಿಗೊಳಿಸಿ ಅವಧಿಯನ್ನು ಮುಂದುವರೆಸಲಾಗಿತ್ತು.**

ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಟ್ಟಡದಲ್ಲಿ ಪ್ರಾಧಿಕಾರದ ಎಲ್ಲಾ ಅಧಿಕಾರಿ/ಸಿಬ್ಬಂದಿಯವರು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಸದರಿ ಹಾಲಿ ಕಟ್ಟಡದಲ್ಲಿ ಲಭ್ಯವಿರುವ ಸ್ಥಳವು ಸಾಕಾಗುವುದಿಲ್ಲ ಹಾಗೂ ಮಾನ್ಯ ಅಧ್ಯಕ್ಷರು ಸಹ ಕಛೇರಿಗೆ ಹೆಚ್ಚಿನ ಸ್ಥಳಾವಕಾಶದ ಅವಶ್ಯಕತೆ ಇರುವ ಬಗ್ಗೆ ಪ್ರಸ್ತಾಪಿಸಿರುವುದರಿಂದ ಸುಮಾರು 500 ರಿಂದ 800 ಚದುರ ಅಡಿ ಅಳತೆಯ ಸ್ಥಳವನ್ನು ಹಾಲಿ ದರದಲ್ಲಿಯೇ ಕಲ್ಪಿಸಿಕೊಡಬೇಕೆಂದು ದಿನಾಂಕ: 19.02.2021ರಂದು ಕಟ್ಟಡದ ಮಾಲೀಕರಾದ ಶ್ರೀ ಆರ್.ಜೈ ಪ್ರಸಾದ್ ರವರಿಗೆ ತಿಳಿಸಿ ಪತ್ರ ಬರೆಯಲಾಗಿತ್ತು.

ಅದರಂತೆ, ಕಟ್ಟಡದ ಮಾಲೀಕರು ಶ್ರೀ ಆರ್.ಜೈ ಪ್ರಸಾದ್, ರವರು ದಿನಾಂಕ: 26.02.2021ರ ಪತ್ರದಲ್ಲಿ ಹೆಚ್ಚುವರಿ 800 ಚದುರ ಅಡಿಗೆ ರೂ. 65/–ರಂತೆ 52,000/– ಗಳನ್ನು ನಿಗಧಿಗೊಳಿಸಿ ಹಾಗೂ ನಿರ್ವಹಣಾ ಶುಲ್ಕ ರೂ. 5,200/–ಗಳನ್ನು ಮತ್ತು ಬಾಡಿಗೆ ಮುಂಗಡ ರೂ.5,20,000/–ಗಳನ್ನು ಪಾವತಿಸಲು ಹಾಗೂ ಪ್ರಸ್ತುತ ಕೆಲಸ ನಿರ್ವಹಿಸುತ್ತಿರುವ ಕಟ್ಟಡಕ್ಕೆ ಮಾರ್ಚ್–2021 ರಿಂದ ಶೇ.5% ರಷ್ಟು ಹೆಚ್ಚಿಸಿ ಪ್ರತಿ ತಿಂಗಳಿಗೆ ಕಛೇರಿ ಬಾಡಿಗೆ ರೂ. 1,65,540/– ಮತ್ತು ನಿರ್ವಹಣಾ ವೆಚ್ಚ ರೂ.15,049/– ಗಳನ್ನು ಪಾವತಿಸುವಂತೆ ಕೋರಿ ಈ ಕಛೇರಿಗೆ ಪತ್ರವನ್ನು ಸಲ್ಲಿಸಿರುತ್ತಾರೆ.

ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಛೇರಿ ಕಟ್ಟಡದ **ಬಾಡಿಗೆ ಕರಾರು ಒಪ್ಪಂದದ ಅವಧಿಯು ದಿನಾಂಕ:31.03.2021ರಂದು ಅಂತ್ಯಗೊಳ್ಳುತ್ತಿರುವುದರಿಂದ** ಸದರಿ ಅವಧಿಯನ್ನು ಮುಂದಿನ 02 ವರ್ಷಗಳ ವರೆಗೆ ಮುಂದುವರೆಸುವ ಬಗ್ಗೆ ಮತ್ತು ಹೆಚ್ಚುವರಿ 800 ಚದುರ ಅಡಿಯನ್ನು ಕಛೇರಿ ಉಪಯೋಗಕ್ಕಾಗಿ ಪಡೆಯುವ ಬಗ್ಗೆ ಹಾಗೂ ಪ್ರಸ್ತುತ ನೀಡುತ್ತಿರುವ ದರದಂತೆಯೇ ಹೆಚ್ಚುವರಿ ಕಟ್ಟಡಕ್ಕೆ ಬಾಡಿಗೆ ಪಾವತಿಸುವ ಸಂಬಂಧ ವಿಷಯವನ್ನು ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:–

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಛೇರಿ ಕಟ್ಟಡದ ಬಾಡಿಗೆ ಅವಧಿಯು ದಿನಾಂಕ:31.03.2021ಕ್ಕೆ ಅಂತ್ಯವಾಗುತ್ತಿರುವುದರಿಂದ ಹಾಗೂ ಹೆಚ್ಚುವರಿಯಾಗಿ ಅವಶ್ಯಕವಿರುವ 800 ಚದುರ ಅಡಿ ಪ್ರದೇಶವನ್ನು ಸಹ ಒಟ್ಟಾರೆಯಾಗಿ ಸೇರಿಸಿಕೊಂಡು ಯಾವುದೇ ಹೆಚ್ಚುವರಿ ಮುಂಗಡ ಹಣವನ್ನು ಪಾವತಿಸದೆ ಹಾಲಿ ನೀಡುತ್ತಿರುವ ದರದಲ್ಲಿಯೇ ಮುಂದಿನ ಎರಡು ವರ್ಷದ ಅವಧಿಗೆ ಕಟ್ಟಡ ಮಾಲೀಕರೊಂದಿಗೆ ಪ್ರತ್ಯೇಕ ಕರಾರು ಒಪ್ಪಂದ ಮಾಡಿಕೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4) **ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಾಗಿದ್ದ MA 1600 CA No-2116 -2128/2020) ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ ವಕೀಲರುಗಳಿಗೆ ಪಾವತಿಸಲಾದ ಶುಲ್ಕ ಸ್ಥಿರೀಕರಿಸುವ ಕುರಿತು.**

*****

ವಿಷಯಕ್ಕೆ ಸಂಬಂಧಿಸಿದಂತೆ, ನ್ಯಾಯಾಲಯದಲ್ಲಿ ದಾಖಲಾಗಿರುವ MA 1600 CA No-2116-2128/2020) ಪ್ರಕರಣವು ಮುಂದುವರೆದು, ಪ್ರಾಧಿಕಾರದ ಪರವಾಗಿ ವಾದ ಮಂಡಿಸಲು ಈ ಹಿಂದೆ ಸರ್ಕಾರದಿಂದ ಅನುಮೋದನೆ ಪಡೆದು ನೇಮಕಗೊಂಡ ವಕೀಲರುಗಳನ್ನು ಮುಂದುವರೆಸಿ, ಸರ್ವೋಚ್ಛ ನ್ಯಾಯಾಲಯದಲ್ಲಿ

ಮುಂದುವರೆದ ಕೇಸ್‌ನಲ್ಲಿ ಪ್ರಾಧಿಕಾರದ ಪರವಾಗಿ ವಾದ ಮಂಡಿಸಲು ವಕೀಲರುಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಹಾಜರಾದ ದಿನಗಳಲ್ಲಿ ವಕೀಲರುಗಳಿಗೆ ಪಾವತಿಸಲಾದ ಸಂಭಾವನೆಯ ವಿವರಗಳು.

ಕ್ರ ಸಂ	ನ್ಯಾಯಾಲಯದಲ್ಲಿ ಹಾಜರಾದ ದಿನಾಂಕ	ಶೈಲೇಶ್ ಮಾಡಿಯಾಳ್ ಕಿರಿಯ ವಕೀಲರು	ಶ್ರೀಮತಿ ಅನಿತಾ ಶೈಣೈ ಹಿರಿಯ ವಕೀಲರು	ಸಿ.ಎ.ಸುಂದರಂ ನುರಿತ ಹಿರಿಯ ವಕೀಲರು	ಒಟ್ಟು ಪಾವತಿ ರೂ.ಗಳಲ್ಲಿ
		Appearance Charges	Appearance Charges	Appearance Charges	
1	22.01.2021	Rs. 33,000	Rs. 75,000	-	-
2	01.02.2021	Rs. 33,000	Rs. 75,000	Rs. 8,25,000	-
	Total	**Rs. 66,000**	**Rs. 1,50,000**	**Rs. 8,25,000**	**Rs. 10,41,000**

ವಕೀಲರುಗಳು ಸಲ್ಲಿಸಲಾಗಿರುವ ಬಿಲ್‌ನ ಮೊತ್ತ ರೂ.10,41,000/– (ಹತ್ತು ಲಕ್ಷದ ನಲವತ್ತೊಂದು ಸಾವಿರ ರೂಪಾಯಿಗಳು) ಗಳ ಶುಲ್ಕವನ್ನು ಪಾವತಿಸಲಾಗಿರುತ್ತದೆ ಮತ್ತು ಪ್ರಾಧಿಕಾರದ 2020–21ನೇ ಸಾಲಿನ ಆಯವ್ಯಯದಲ್ಲಿ ರೂ.50.00 ಲಕ್ಷಗಳನ್ನು ಸರ್ವೋಚ್ಚ ನ್ಯಾಯಾಲಯದ ಪ್ರಕರಣಕ್ಕೆ ಕಾನೂನು ವೆಚ್ಚವಾಗಿ ಕಾಯ್ದಿರಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಸಭೆಯ ಅವಗಾಹನೆಗೆ ತರುತ್ತಾ, ಪ್ರಾಧಿಕಾರದಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ವಕೀಲರುಗಳಿಗೆ ಪಾವತಿಸಿರುವ ಶುಲ್ಕದ ಮೊತ್ತಗಳಿಗೆ ಘಟನ್ನೋತ್ತರ ಮಂಜೂರಾತಿಗಾಗಿ ವಿಷಯವನ್ನು ಸಭೆಗೆ ಮಂಡಿಸಿದೆ.

ತೀರ್ಮಾನ:–

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದ ಪರವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವಾದ ಮಂಡಿಸಿದ ವಕೀಲರುಗಳಿಗೆ ಪಾವತಿಸಿರುವ ವೆಚ್ಚವನ್ನು ಸಭೆಯಲ್ಲಿ ಪರಿಶೀಲಿಸಿ ಅಂಗೀಕರಿಸಲಾಯಿತು.

II ತಾಂತ್ರಿಕ ಶಾಖೆ ಪ್ರಸ್ತಾವನೆಗಳು

1) ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ / ತಾಂತ್ರಿಕ ಅಭಿಪ್ರಾಯ ನೀಡಿರುವುದನ್ನು ಸ್ಥಿರೀಕರಿಸುವ ಬಗ್ಗೆ.

*****

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಜನವರಿ–2021 ಮತ್ತು ಫೆಬ್ರವರಿ–2021 ಮಾಹೆಯಲ್ಲಿ ಕಟ್ಟಡ ಕಟ್ಟಲು ಒಟ್ಟು 17 ಪ್ರಾರಂಭಿಕ ಪ್ರಮಾಣ ಪತ್ರ / ತಾಂತ್ರಿಕ ಅಭಿಪ್ರಾಯವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ನೀಡಿರುವ ವಿವರಗಳನ್ನು ಅನುಬಂಧ–2ರಲ್ಲಿ ಲಗತ್ತಿಸಿದ್ದು, ಸದರಿ ವಿಷಯವನ್ನು ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ

ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ಜನವರಿ–2021 ಮತ್ತು ಫೆಬ್ರವರಿ–2021ರಲ್ಲಿ ಕಟ್ಟಡ ಪರವಾನಗೆ ಸಂಬಂಧ ಸ್ಥಳೀಯ ಸಂಸ್ಥೆಗಳಿಗೆ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರ / ತಾಂತ್ರಿಕ ಅಭಿಪ್ರಾಯಗಳನ್ನು ಪರಿಶೀಲಿಸಿ ಅಂಗೀಕರಿಸಲಾಯಿತು.

III ವಿನ್ಯಾಸ ಅನುಮೋದನೆ ಪ್ರಕರಣಗಳು

1) **ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:15/2ರ 01ಎಕರೆ, 15/3ರ 01ಎ–20ಗು, 15/4ರ 0ಎ–10ಗು ಮತ್ತು ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:103/1ರ 01ಎ–05ಗು, 103/2(ಹೊಸ ಸಂಖ್ಯೆ:103/11)ರ 01ಎ–10ಗು, 103/2(ಹೊಸ ಸಂಖ್ಯೆ:103/13)ರ 01ಎಕರೆ, 103/2(ಹೊಸ ಸಂಖ್ಯೆ:103/14)ರ 01ಎಕರೆ, 103/3ರ 01ಎಕರೆ, 103/4ರ 02ಎಕರೆ, 103/5ರ 02ಎಕರೆ, 103/6ರ 0ಎ–30ಗು, 103/7ರ 01ಎಕರೆ, 103/8ರ 02ಎಕರೆ, 103/9ರ 0ಎ–05ಗು, 105/8ರ 01ಎ–02ಗು, 105/12ರ 0ಎ–5¾ಗು, 105/15ರ 0ಎ–30ಗು ಒಟ್ಟು 17ಎ–37¾ಗು ವಿಸ್ತೀರ್ಣದ ಜಮೀನಿನಲ್ಲಿ ಮಾರ್ಪಾಡಿತ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿ ಮೆ॥ ಎಸ್ಸೆಎಮ್ 18 ಡೆವಲಪರ್ಸ್ ಪ್ರೈ.ಲಿ., ನಿರ್ದೇಶಕರಾದ ಶ್ರೀ ಎಸ್.ಎಂ.ವೆಂಕಟೇಶ್, ಶ್ರೀ ಸಂದೀಪ್‌ಕುಮಾರ್.ವಿ, ಶ್ರೀ ವಿ.ನಾಗೇಶ್, ಶ್ರೀ ಪ್ರಕಾಶ್ ಬಾಬು.ಕೆ., ಶ್ರೀ ಎಂ.ವೆಂಕಟರಾಯುಡು @ ಎಂ.ವಿ.ರಾಯುಡು ಇವರು ಸಲ್ಲಿಸಿರುವ ಮನವಿ ಕುರಿತು.**

******

ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:15/2ರ 01ಎಕರೆ, 15/3ರ 01ಎ–20ಗು, 15/4ರ 0ಎ–10ಗು ಮತ್ತು ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:103/1ರ 01ಎ–05ಗು, 103/2(ಹೊಸ ಸಂಖ್ಯೆ:103/11)ರ 01ಎ–10ಗು, 103/2(ಹೊಸ ಸಂಖ್ಯೆ:103/13)ರ 01ಎಕರೆ, 103/2(ಹೊಸ ಸಂಖ್ಯೆ:103/14)ರ 01ಎಕರೆ, 103/3ರ 01ಎಕರೆ, 103/4ರ 02ಎಕರೆ, 103/5ರ 02ಎಕರೆ, 103/6ರ 0ಎ–30ಗು, 103/7ರ 01ಎಕರೆ, 103/8ರ 02ಎಕರೆ, 103/9ರ 0ಎ–05ಗು, 105/8ರ 01ಎ–02ಗು, 105/12ರ 0ಎ–5¾ಗು, 105/15ರ 0ಎ–30ಗು ಒಟ್ಟು 17ಎ–37¾ಗು ವಿಸ್ತೀರ್ಣದ ಜಮೀನಿಗೆ ಈಗಾಗಲೇ ಅನುಮೋದನೆಯಾಗಿರುವ ಪರಿಷ್ಕೃತ ಮಾರ್ಪಡಿತ ವಸತಿ ವಿನ್ಯಾಸದ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸುವ ಸಮಯದಲ್ಲಿ ಕೆಲವೊಂದು ಬದಲಾವಣೆಗಳಾಗಿದ್ದು, ಅದರಂತೆ ಮಾರ್ಪಡಿತ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇ.100ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಅರ್ಜಿದಾರರು ಕೋರಿರುತ್ತಾರೆ.

ಪರಿಶೀಲಿಸಲಾಗಿ, ದಿನಾಂಕ:05.03.2018ರಂದು ಜರುಗಿದ ಪ್ರಾಧಿಕಾರದ 60ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:5ರಲ್ಲಿ ಮಂಡಿಸಲಾಗಿದ್ದು, ಸಭೆಯ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ)ರಂತೆ ಪ್ರಾಧಿಕಾರದಿಂದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:16.05.2018ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ ಮತ್ತು ಅರ್ಜಿದಾರರು ಮಾರ್ಪಡಿತ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಮನವಿ ಸಲ್ಲಿಸಿದ ಹಿನ್ನಲೆಯಲ್ಲಿ ವಿಷಯವನ್ನು ದಿನಾಂಕ:01.02.2019ರಂದು ಜರುಗಿದ ಪ್ರಾಧಿಕಾರದ 62ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:40ರಲ್ಲಿ ಮಂಡಿಸಲಾಗಿ, "ಪ್ರಕರಣದ ವಿವರಗಳನ್ನು ಗಮನಿಸಿದ ಸಭೆಯು, ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನೆ ಆದೇಶ ಪತ್ರದ ನಿಬಂಧನೆ ಸಂಖ್ಯೆ:7 ರಲ್ಲಿ ಸೂಚಿಸಲಾದಂತೆ, ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಇವರು ದೃಢೀಕರಿಸಿರುವ ಪರಿಷ್ಕೃತ ಜಂಟಿ ಸರ್ವೆ ನಕ್ಷೆಯಂತೆ ಅರ್ಜಿದಾರರು ವಸತಿ ವಿನ್ಯಾಸ ನಕ್ಷೆ ಮಾರ್ಪಡು ಮಾಡಿ ಅನುಮೋದನೆ ಕೋರಿರುವುದನ್ನು ಸಭೆಯು ಗಮನಿಸಿತು. ಮಾರ್ಪಡಿತ ವಸತಿ ವಿನ್ಯಾಸ ನಕ್ಷೆಯಲ್ಲಿ ನಾಲಾಗೆ ಸೂಕ್ತವಾಗಿ ಬಫರ್ ಅಳವಡಿಸಿದ್ದು, ವಿನ್ಯಾಸವು ವಲಯ ನಿಯಮಾವಳಿಯಂತೆ ಇರುವುದರಿಂದ ಹಾಗೂ ರಸ್ತೆ ಪರಿಚಲನೆ ಸೂಕ್ತವಾಗಿರುವುದರಿಂದ, ಮಾರ್ಪಡಿತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ". ಸದರಿ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ದಿನಾಂಕ:15.03.2019ರಂದು ಪ್ರಾಧಿಕಾರದಿಂದ ಕೆಲವು ಷರತ್ತುಗಳಿಗೊಳಪಡಿಸಿ, ಮಾರ್ಪಡಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲಾಗಿದೆ.

ಅರ್ಜಿದಾರರು ಕೋರಿರುವಂತೆ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವ ಸಂಬಂಧ ದಿನಾಂಕ:15.03.2021ರಂದು ಸ್ಥಳ ಪರಿಶೀಲನೆ ಮಾಡಲಾಗಿ ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಅಭಿವೃದ್ಧಿಪಡಿಸುವ ಸಮಯದಲ್ಲಿ ಕೆಲವೊಂದು ಬದಲಾವಣೆಗಳಾಗಿದ್ದು, ಅದರಂತೆ ಅರ್ಜಿದಾರರು ತಮ್ಮ ಮನವಿಯಲ್ಲಿ ಕೋರಿರುವಂತೆ ವಿನ್ಯಾಸವನ್ನು ಸ್ಥಳದಲ್ಲಿ ಅಭಿವೃದ್ಧಿಪಡಿಸಿರುವಂತೆ ಮಾರ್ಪಡಿತ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ಶೇ.100ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದ್ದು ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:15/2ರ 01ಎಕರೆ, 15/3ರ 01ಎ–20ಗು, 15/4ರ 0ಎ–10ಗು ಮತ್ತು ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:103/1ರ 01ಎ–05ಗು, 103/2(ಹೊಸ ಸಂಖ್ಯೆ:103/11)ರ 01ಎ–10ಗು, 103/2(ಹೊಸ ಸಂಖ್ಯೆ:103/13)ರ 01ಎಕರೆ, 103/2(ಹೊಸ ಸಂಖ್ಯೆ:103/14)ರ 01ಎಕರೆ, 103/3ರ 01ಎಕರೆ, 103/4ರ 02ಎಕರೆ, 103/5ರ 02ಎಕರೆ, 103/6ರ 0ಎ–30ಗು, 103/7ರ 01ಎಕರೆ, 103/8ರ 02ಎಕರೆ, 103/9ರ 0ಎ–05ಗು, 105/8ರ 01ಎ–02ಗು, 105/12ರ 0ಎ–5¾ಗು, 105/15ರ 0ಎ–30ಗು ಒಟ್ಟು 17ಎ–37¾ಗು ವಿಸ್ತೀರ್ಣದ ಜಮೀನಿಗೆ ಅಂತಿಮ ಅನುಮೋದನೆ ನೀಡುವ ಸಂಬಂಧ ಪ್ರಾಧಿಕಾರದಿಂದ ದಿನಾಂಕ: 15.03.2021ರಂದು ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ವಿನ್ಯಾಸವನ್ನು ಅನುಮೋದಿತ ತಾತ್ಕಾಲಿಕ ಮಾರ್ಪಡಿತ ವಸತಿ ವಿನ್ಯಾಸ ನಕ್ಷೆಯಂತೆ ಅರ್ಜಿದಾರರು ಸ್ಥಳದಲ್ಲಿ ಅಭಿವೃದ್ಧಿಪಡಿಸಿದ್ದು, ಅಭಿವೃದ್ಧಿಪಡಿಸುವ ಸಮಯದಲ್ಲಿ ಕೆಲವೊಂದು ಬದಲಾವಣೆಗಳು ಆಗಿದ್ದು, ಅದರಂತೆ ಮಾರ್ಪಡಿತ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ಸದಸ್ಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು.

ನಂತರ ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಅರ್ಜಿದಾರರು ನೆಲದ ಮೇಲೆ ಅಭಿವೃದ್ಧಿಪಡಿಸಿರುವಂತೆ ಪ್ರಸ್ತಾಪಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಡಿಸಿ ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು, ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶಗಳನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ಮತ್ತು ನಾಗರೀಕ ಸೌಲಭ್ಯ ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಮಾರ್ಪಡಿತ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ ವಿನ್ಯಾಸದಲ್ಲಿನ ಎಲ್ಲಾ (ಶೇ.100 ರಷ್ಟು) ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ.

2) **ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:4ರ 01ಎ–20ಗು, ಸರ್ವೆ ಸಂಖ್ಯೆ:6/1ರ 0ಎ–32ಗು ಮತ್ತು 6/2ರ 0ಎ–32ಗು ಒಟ್ಟು 03ಎ–04ಗು ವಿಸ್ತೀರ್ಣದ ಜಮೀನಿನಲ್ಲಿ ಅನುಮೋದನೆ ನೀಡಿರುವ ವಿನ್ಯಾಸದಲ್ಲಿನ ಅಂತಿಮ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಶ್ರೀ ಪಿ.ಹೆಚ್.ರಾಮೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.**

*****

ಅರ್ಜಿದಾರರಾದ ಶ್ರೀ ಪಿ.ಹೆಚ್.ರಾಮೇಗೌಡ ರವರು ದಿನಾಂಕ:15.06.2020ರ ಮನವಿ ಸಲ್ಲಿಸಿ, ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:4ರ 01ಎ–20ಗು, ಸರ್ವೆ ಸಂಖ್ಯೆ:6/1ರ 0ಎ–32ಗು ಮತ್ತು 6/2ರ 0ಎ–32ಗು ಒಟ್ಟು 03ಎ–04ಗು ವಿಸ್ತೀರ್ಣದ ಜಮೀನಿಗೆ ಅನುಮೋದನೆಯಾದ ವಸತಿ ವಿನ್ಯಾಸದಲ್ಲಿನ ಅಂತಿಮ ಹಂತದ ಉಳಿಕೆ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ ದಿನಾಂಕ:16.04.2015ರಂದು ಜರುಗಿದ ಪ್ರಾಧಿಕಾರದ 44ನೇ ಸಾಮಾನ್ಯ ಸಭೆಯ ವಿಷಯ ಸಂ. 44.5.1ರ ತೀರ್ಮಾನದಂತೆ ವಸತಿ ವಿನ್ಯಾಸಕ್ಕೆ ಕೆಲವು ಷರತ್ತುಗಳಿಗೆ ಒಳಪಡಿಸಿ ಅನುಮೋದನೆ ನೀಡಿ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 08 ಟಿಟಿಪಿ 2013, ದಿನಾಂಕ:24.05.2014ರನ್ವಯ ಪ್ರಾಧಿಕಾರದ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ವಿನ್ಯಾಸ/05/2014–15, ದಿನಾಂಕ:30.11.2015ರಲ್ಲಿ ವಿನ್ಯಾಸದಲ್ಲಿನ ಮೊದಲನೇ ಹಂತದ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಿ ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ನಿವೇಶನ ಬಿಡುಗಡೆ ಪ್ರಮಾಣ ಪತ್ರವನ್ನು ನೀಡಲಾಗಿದೆ ಮತ್ತು ದಿನಾಂಕ:08.07.2019ರಂದು ಜರುಗಿದ ಪ್ರಾಧಿಕಾರದ 63ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:27ರ ತೀರ್ಮಾನದಂತೆ ಪ್ರಾಧಿಕಾರದ ಪತ್ರ ಸಂಖ್ಯೆ : ಬಿಎಂಐಸಿಎಪಿಎ/ ವಿನ್ಯಾಸ/05/2014–15/1040, ದಿನಾಂಕ:26.08.2019ರಲ್ಲಿ 2ನೇ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ.

ಅರ್ಜಿದಾರರು ಅಂತಿಮ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಕೋರಿ ದಿನಾಂಕ:15.06.2020ರಂದು ಮನವಿ ಸಲ್ಲಿಸಿರುತ್ತಾರೆ. ಈ ಪ್ರಾಧಿಕಾರದಿಂದ ವಸತಿ ವಿನ್ಯಾಸ ಅನುಮೋದನೆ ನೀಡಿ 05 ವರ್ಷ ಅವಧಿಯು ದಿನಾಂಕ:30.11.2020ಕ್ಕೆ ಪೂರ್ಣಗೊಂಡಿರುತ್ತದೆ. ಆದರೆ ಸರ್ಕಾರದ ಆದೇಶ ಸಂಖ್ಯೆ: ನಅಇ 153 ಬೆಮಪ್ರಾ 2020(ಇ) ಬೆಂಗಳೂರು ದಿನಾಂಕ:17.11.2020 ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರಡಿ ನೀಡಲಾಗಿರುವ ಅನುಮೋದನೆಗಳ ಊರ್ಜಿತಾವಧಿಯು ದಿನಾಂಕ:25.03.2020 ರಂದು ಅಥವಾ ಆ ನಂತರ ಮುಕ್ತಾಯವಾದಲ್ಲಿ ಊರ್ಜಿತಾವಧಿ ಮುಕ್ತಾಯಗೊಂಡ ದಿನದಿಂದ ಒಂದು ವರ್ಷದವರೆಗೆ ಊರ್ಜಿತಾವಧಿಯನ್ನು ಯಾವುದೇ ಹೆಚ್ಚಿನ ದರಗಳನ್ನು ಪಾವತಿಸಿಕೊಳ್ಳದೇ ವಿಸ್ತರಿಸಲು ಸೂಚಿಸಲಾಗಿದೆ.

ಪ್ರಾಧಿಕಾರದಿಂದ ದಿನಾಂಕ:17.02.2021ರಂದು ಸ್ಥಳ ಪರಿಶೀಲಿಸಲಾಗಿ, ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ವಯ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುತ್ತಾರೆ. ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 08 ಟಿಟಿಪಿ 2013, ದಿನಾಂಕ:24.05.2014ರನ್ವಯ ವಿನ್ಯಾಸದಲ್ಲಿನ ಅಂತಿಮ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ಸಲ್ಲಿಸಬೇಕಾದ ಸಕ್ಷಮ ಪ್ರಾಧಿಕಾರಗಳಿಂದ ಪಡೆದ ದೃಢೀಕರಣ ಪತ್ರಗಳನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ವಸತಿ ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳನ್ನು ಅರ್ಜಿದಾರರು ಪೂರ್ಣಗೊಳಿಸಿರುವುದರಿಂದ ಹಾಗೂ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸಿರುವುದರಿಂದ, ವಸತಿ ವಿನ್ಯಾಸದಲ್ಲಿನ ಅಂತಿಮ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದ್ದು, ವಿಷಯವನ್ನು ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:4ರ 01ಎ–20ಗು, ಸರ್ವೆ ಸಂಖ್ಯೆ:6/1ರ 0ಎ–32ಗು ಮತ್ತು 6/2ರ 0ಎ–32ಗು ಒಟ್ಟು 03ಎ–04ಗು ವಿಸ್ತೀರ್ಣದ ಜಮೀನಿಗೆ ಅಂತಿಮ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಸಂಬಂಧ ಸರ್ಕಾರದ ಸುತ್ತೋಲೆ ದಿನಾಂಕ: 24.05.2014ರಂತೆ ಅರ್ಜಿದಾರರು ವಸತಿ ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಈ ಸಂಬಂಧ ಸಕ್ಷಮ ಪ್ರಾಧಿಕಾರಗಳಿಂದ ದೃಢೀಕರಣ/ನಿರಾಕ್ಷೇಪಣಾ ಪತ್ರಗಳನ್ನು ಸಲ್ಲಿಸಿರುವುದರಿಂದ, ಪ್ರಸ್ತಾಪಿತ ವಿನ್ಯಾಸದಲ್ಲಿನ ಅಂತಿಮ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು

3) **ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ರಮ್ಮನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:10/2ರ 0ಎ–25ಗು, 10/3ರ 02ಎ–26ಗು, 11ರ 01ಎ–02ಗು ಮತ್ತು ಸರ್ವೆ ಸಂಖ್ಯೆ:16/2ರ 01ಎ–25ಗು ಒಟ್ಟು 05ಎ–38ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಶ್ರೀ ವಿ.ಮೋಹನ್‌ರಾಜ್ ಮತ್ತು ಉನ್ನತಿ ಶೆಲ್ಟರ್ಸ್ ಪ್ರೈವೇಟ್ ಲಿ. ಇವರು ಸಲ್ಲಿಸಿರುವ ಮನವಿ ಕುರಿತು.**

*****

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ರಮ್ಮನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:10/2ರ 0ಎ–25ಗು, 10/3ರ 02ಎ–26ಗು, 11ರ 01ಎ–02ಗು ಮತ್ತು ಸರ್ವೆ ಸಂಖ್ಯೆ:16/2ರ 01ಎ–25ಗು ಒಟ್ಟು 05ಎ–38ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಶ್ರೀ ವಿ.ಮೋಹನ್‌ರಾಜ್ ಮತ್ತು ಉನ್ನತಿ ಶೆಲ್ಟರ್ಸ್ ಪ್ರೈವೇಟ್ ಲಿ. ಇವರು ದಿನಾಂಕ:28.11.2017ರಂದು ಅರ್ಜಿ ಸಲ್ಲಿಸಿದ್ದ ಹಿನ್ನಲೆಯಲ್ಲಿ, ವಿಷಯವನ್ನು ದಿನಾಂಕ:22.12.2017ರಂದು ಜರುಗಿದ ಪ್ರಾಧಿಕಾರದ 58ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:10ರಲ್ಲಿ ಮಂಡಿಸಲಾಗಿ, ಸಭೆಯ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ)ರಂತೆ ಪ್ರಾಧಿಕಾರದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:20.02.2018ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಅರ್ಜಿದಾರರ ದಿನಾಂಕ:09.03.2020ರ ಮನವಿ ಮೇರೆಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರಮ್ಮನಹಳ್ಳಿ ಗ್ರಾಮ ಪಂಚಾಯಿತಿ ರವರು ಪತ್ರ ಸಂಖ್ಯೆ:ರ.ಗ್ರಾ.ಪಂ.ಪತ್ರದ ಸಂ/95/2019–20, ದಿನಾಂಕ:13.11.2020ರಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ವಸತಿ ವಿನ್ಯಾಸದ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಕುರಿತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಪಡೆದ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರಗಳನ್ನು ಲಗತ್ತಿಸಿ, ಪ್ರಸ್ತಾಪಿತ ಜಮೀನುಗಳ ಅಂತಿಮ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಲಾಗಿದೆ.

ಪ್ರಾಧಿಕಾರದಿಂದ ದಿನಾಂಕ:19.12.2020ರಂದು ಸ್ಥಳ ಪರಿಶೀಲಿಸಲಾಗಿ, ಅರ್ಜಿದಾರರು ವಿನ್ಯಾಸದಲ್ಲಿನ ರಸ್ತೆ, ಉದ್ಯಾನವನ, ನಾಗರೀಕ ಸೌಲಭ್ಯ ನಿವೇಶನ, ವಸತಿ ನಿವೇಶನದ ಜಾಗಗಳನ್ನು ತಾತ್ಕಾಲಿಕ ವಿನ್ಯಾಸ ನಕ್ಷೆಯಂತೆ ಅಭಿವೃದ್ಧಿಪಡಿಸಿದ್ದು, ಉದ್ಯಾನವನ ಮತ್ತು ನಾಗರೀಕ ಸೌಲಭ್ಯ ಪ್ರದೇಶಕ್ಕೆ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸಿರುತ್ತಾರೆ. ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ಸಲ್ಲಿಸಬೇಕಾದ ಸಕ್ಷಮ ಪ್ರಾಧಿಕಾರಗಳಿಂದ ಪಡೆದ ದೃಢೀಕರಣ ಪತ್ರಗಳನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಅರ್ಜಿದಾರರು ಪ್ರಸ್ತಾಪಿತ ವಿನ್ಯಾಸದಲ್ಲಿನ ರಸ್ತೆ ಹಾಗೂ ಉದ್ಯಾನವನದ ಜಾಗೆಯನ್ನು ಹಿರಿಯ ಉಪ ನೋಂದಣಾಧಿಕಾರಿ, ಮೈಸೂರು ಉತ್ತರ ರವರ 1ನೇ ಪುಸ್ತಕದ ದಸ್ತಾವೇಜು ನಂ:MYN-1-08051-2018-19 ಆಗಿ ಸಿ.ಡಿ.ನಂಬರ್ MYND447 ನೇದ್ದರಲ್ಲಿ ದಿನಾಂಕ:07.02.2019ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರಮ್ಮನಹಳ್ಳಿ ಗ್ರಾಮ ಪಂಚಾಯಿತಿ ರವರಿಗೆ ಹಸ್ತಾಂತರಿಸಿರುತ್ತಾರೆ.

ಅದರಂತೆ, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ಈ ಕುರಿತು ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ/ದೃಢೀಕರಣ ಪತ್ರ ಸಲ್ಲಿಸಿರುವುದರಿಂದ, ಸದರಿ ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯ ಜಾಗವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2ಬಿ) ರನ್ವಯ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ರಮ್ಮನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 10/2ರ 0ಎ–25ಗು, 10/3ರ 02ಎ–26ಗು, 11ರ 01ಎ–02ಗು

ಮತ್ತು ಸರ್ವೆ ಸಂಖ್ಯೆ:16/2ರ 01ಎ–25ಗು ಒಟ್ಟು 05ಎ–38ಗು ವಿಸ್ತೀರ್ಣದ ಜಮೀನಿಗೆ ಪ್ರಾಧಿಕಾರದ ಆದೇಶ ಸಂಖ್ಯೆ:ಬಿ.ಎಂ.ಐ.ಸಿ.ಎ.ಪಿ.ಎ/ನ.ಯೋ–2/ವಸತಿ ವಿನ್ಯಾಸ/15/2017–18/1509, ದಿನಾಂಕ:20.02.2018ರಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲಾಗಿದ್ದು, ಅರ್ಜಿದಾರರು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿ, ವಸತಿ ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಸಮರ್ಪಕವಾಗಿ ಪೂರ್ಣಗೊಳಿಸಿರುವ ಬಗ್ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ದೃಢೀಕರಣ ಪತ್ರಗಳನ್ನು ಸಲ್ಲಿಸಿರುವುದರಿಂದ, ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಲಾಗಿ, ಅರ್ಜಿದಾರರು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಾಗಿ ಹಾಗೂ ವಸತಿ ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಈಗಾಗಲೇ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿರುವುದನ್ನು ಸದಸ್ಯ–ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು.

ಅದರಂತೆ, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ದೃಢೀಕರಣ ಪತ್ರಗಳನ್ನು ಸಲ್ಲಿಸಿರುವುದರಿಂದ ಹಾಗೂ ವಸತಿ ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಈಗಾಗಲೇ ಅರ್ಜಿದಾರರು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿರುವುದರಿಂದ, ವಸತಿ ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 2015 ಕಲಂ 17(2–ಬಿ) ರಂತೆ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4) **ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:170/2ರ 03ಎ–29ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಶ್ರೀ ಬಿ.ಆರ್.ಕುಮಾರ್ ಬಿನ್ ಲೇಟ್ ಬಿ.ಸಿ.ರಂಗೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.**

******

ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರಾದ ಶ್ರೀ ಬಿ.ಆರ್.ಕುಮಾರ್ ಬಿನ್ ಲೇಟ್ ಬಿ.ಸಿ.ರಂಗೇಗೌಡ ರವರು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:170/2ರ 03ಎ–29ಗು ವಿಸ್ತೀರ್ಣದ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 133 ಮೈಅಪ್ರಾ 2019 (ಇ), ಬೆಂಗಳೂರು, ದಿನಾಂಕ:24.09.2020ರಲ್ಲಿ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:170/2ರ 03ಎ–29ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿರುತ್ತದೆ ಮತ್ತು ಪ್ರಾಧಿಕಾರದ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–04/17/2018–19/791, ದಿನಾಂಕ:15.10.2020ರಲ್ಲಿ ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

ಪ್ರಸ್ತಾಪಿತ ಜಮೀನನ್ನು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:201338, ದಿನಾಂಕ:12.01.2021ರಲ್ಲಿ ಕೆಸರೆ ಗ್ರಾಮದ ಸರ್ವೆ ಸಂಖ್ಯೆ:170/2ರ 03ಎ–29ಗು ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ಇವರ ಪತ್ರ ಸಂಖ್ಯೆ: ವಿಭೂಸ್ವಾ–2/ ಬಿಎಂಐಸಿಪಿ/ಸಿ.ಆರ್:/22/2018–19, ದಿನಾಂಕ:20.02.2019ರಲ್ಲಿ "ಮೈಸೂರು ತಾಲ್ಲೂಕು, ಕಸಬಾ

ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:170/2ರ 03ಎ–29ಗು ವಿಸ್ತೀರ್ಣದ ಜಮೀನಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ, ಮೈಸೂರು ಇವರ ಪತ್ರ ಸಂಖ್ಯೆ: ಭೂಸ್ವಾ(3)ಸಿ.ಆರ್/ /2018–19/1332, ದಿನಾಂಕ:11.02.2019ರಲ್ಲಿ "ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:170/2ರ 03ಎ–29ಗು ವಿಸ್ತೀರ್ಣದ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಇದುವರೆವಿಗೂ ಯಾವುದೇ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ಪ್ರಸ್ತಾಪಿತ ಜಮೀನಿನ ಪಶ್ಚಿಮಕ್ಕೆ 12.0ಮೀ ಅಗಲದ ಜಿಲ್ಲಾ ಮುಖ್ಯ ರಸ್ತೆಯಿಂದ ಹಾಗೂ ದಕ್ಷಿಣಕ್ಕೆ 12.0ಮೀ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ. ಅರ್ಜಿದಾರರು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಹಾಗೂ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸಲ್ಲಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿರುತ್ತದೆ. ಸಲ್ಲಿಸಿರುವ ನಕ್ಷೆಯಲ್ಲಿನ ಭೂ ಉಪಯೋಗ ವಿಶ್ಲೇಷಣಾ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ಭೂ ಉಪಯೋಗ	ನಕ್ಷೆಯ ಪ್ರಕಾರ ವಿಸ್ತೀರ್ಣ (ಚ.ಮೀ.ಗಳಲ್ಲಿ)	ನಕ್ಷೆ ಪ್ರಕಾರ ಶೇಕಡವಾರು	ವಲಯ ನಿಯಮಾವಳಿಯಂತೆ ಶೇಕಡವಾರು
1	ವಸತಿ	8046.31	53.38	ಗರಿಷ್ಠ 55.00
2	ಉದ್ಯಾನವನ	1956.07	12.98	ಕನಿಷ್ಠ 10.00
3	ನಾಗರೀಕ ಸೌಲಭ್ಯ	755.67	5.01	ಕನಿಷ್ಠ 5.00
4	ರಸ್ತೆ	4316.28	28.63	–
	ಒಟ್ಟು	**15074.33**	**100.00**	–

ಪ್ರಸ್ತಾಪಿತ ವಸತಿ ವಿನ್ಯಾಸ ನಕ್ಷೆಯಲ್ಲಿ ರಸ್ತೆ ಪರಿಚಲನೆ ಸೂಕ್ತವಾಗಿರುವುದರಿಂದ ಹಾಗೂ ಭೂ ಉಪಯೋಗಗಳು ವಲಯ ನಿಯಮಾವಳಿಗಳ ಮಿತಿಯಲ್ಲಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ) ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:170/2ರ 03ಎ–29ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಪ್ರಾಧಿಕಾರದ ಮಹಾಯೋಜನೆಯಲ್ಲಿ ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 133 ಮೈಅಪ್ರಾ 2019 (ಇ), ಬೆಂಗಳೂರು, ದಿನಾಂಕ:24.09.2020ರಲ್ಲಿ ಸದರಿ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರದ ಅನುಮೋದನೆ ನೀಡಲಾಗಿದ್ದು, ಪ್ರಾಧಿಕಾರದ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–04/17/2018–19/791, ದಿನಾಂಕ:15.10.2020ರಲ್ಲಿ ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದ್ದು, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:201338, ದಿನಾಂಕ:12.01.2021ರಲ್ಲಿ ಸದರಿ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಲಾಗಿರುತ್ತದೆ. ಅರ್ಜಿದಾರರು ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಹಾಗೂ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸಲ್ಲಿಸಿರುವುದರಿಂದ ಹಾಗೂ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗೆ ಅನುಗುಣವಾಗಿರುವುದರಿಂದ,

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ:170/2ರ 03ಎ–29ಗು ವಿಸ್ತೀರ್ಣದ ಜಮೀನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು ಹಾಗೂ ವಿನ್ಯಾಸ ನಕ್ಷೆಯಲ್ಲಿ ನ್ಯೂನತೆ ಇದ್ದಲ್ಲಿ ವಲಯ ನಿಯಮಾವಳಿಗಳ ಮಿತಿಯಲ್ಲಿ ಪರಿಶೀಲಿಸಿಕೊಂಡು ಅನುಮೋದಿಸಲು ಸದಸ್ಯ–ಕಾರ್ಯದರ್ಶಿ ರವರಿಗೆ ಅಧಿಕಾರ ನೀಡಲಾಯಿತು.

IV ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಪ್ರಕರಣಗಳು

1) **ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಆಲೂರು ಗ್ರಾಮದ ಸರ್ವೆ ಸಂಖ್ಯೆ:60/12ರ 01ಎ–20ಗು, 60/15ರ 0ಎ–20ಗು, 62/4ರ 0ಎ–25ಗು, 203/1ರ 0ಎ–30ಗು, 203/2ರ 02ಎ–10ಗು, 203/3ರ 01ಎಕರೆ, 203/4ರ 01ಎಕರೆ, 218ರ 01ಎ–25ಗು, 219ರ 01ಎಕರೆ, 220ರ 01ಎಕರೆ, 221ರ 0ಎ–35ಗು ಒಟ್ಟು 12ಎ–05ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ಶೈಕ್ಷಣಿಕ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಬಿ.ರಾಮಕೃಷ್ಣ ಬಿನ್ ಲೇಟ್ ಬೆಟ್ಟೇಗೌಡ.ಹೆಚ್.ಬಿ ಮತ್ತು ಶ್ರೀಮತಿ ಪಿ.ಚಂದ್ರಕಲಾ ಕೋಂ ಬಿ.ರಾಮಕೃಷ್ಣ ಇವರು ಸಲ್ಲಿಸಿರುವ ಮನವಿ ಕುರಿತು.**

*****

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಆಲೂರು ಗ್ರಾಮದ ಸರ್ವೆ ಸಂಖ್ಯೆ:60/12ರ 01ಎ–20ಗು, 60/15ರ 0ಎ–20ಗು, 62/4ರ 0ಎ–25ಗು, 203/1ರ 0ಎ–30ಗು, 203/2ರ 02ಎ–10ಗು, 203/3ರ 01ಎಕರೆ, 203/4ರ 01ಎಕರೆ, 218ರ 01ಎ–25ಗು, 219ರ 01ಎಕರೆ, 220ರ 01ಎಕರೆ, 221ರ 0ಎ–35ಗು ಒಟ್ಟು 12ಎ–05ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ಶೈಕ್ಷಣಿಕ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ವಿಭೂಸ್ವಾ–2/ ಬಿಎಂಐಸಿಪಿ/ಸಿಆರ್:/18/2020–21, ದಿನಾಂಕ:15.10.2020ರಲಿ, ಮಂಡ್ಯ ಜಿಲ್ಲೆ, ಆಲೂರು ಗ್ರಾಮದ ಸರ್ವೆ ಸಂಖ್ಯೆ:60/12ರ 01ಎ–20ಗು, 60/15ರ 0ಎ–20ಗು, 62/4ರ 0ಎ–25ಗು, 203/1ರ 0ಎ–30ಗು, 203/2ರ 02ಎ–10ಗು, 203/3ರ 01ಎಕರೆ, 203/4ರ 01ಎಕರೆ, 218ರ 01ಎ–25ಗು, 219ರ 01ಎಕರೆ, 220ರ 01ಎಕರೆ, 221ರ 0ಎ–35ಗು ಒಟ್ಟು 12ಎ–05ಗು ವಿಸ್ತೀರ್ಣದ ಜಮೀನುಗಳಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ, ಕಕೈಪ್ರಮಂ, ವಲಯ ಕಛೇರಿ, ಮೈಸೂರು ರವರ ಪತ್ರ ಸಂಖ್ಯೆ: ಭೂಸ್ವಾ(7)ಸಿ.ಆರ್/ / 2016–17/1530, ದಿನಾಂಕ:14.02.2017ರಲ್ಲಿ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಆಲೂರು ಗ್ರಾಮದ ಸರ್ವೆ ಸಂಖ್ಯೆ: 203/1ರ 0ಎ–30ಗು, 203/2ರ 02ಎ–10ಗು, 203/3ರ 01ಎಕರೆ, 203/4ರ 01ಎಕರೆ, 218ರ 01ಎ–25ಗು, 219ರ 01ಎಕರೆ, 220ರ 01ಎಕರೆ, 221ರ 0ಎ–35ಗು ಒಟ್ಟು 09ಎ–20ಗು ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಇದುವರೆವಿಗೂ ಯಾವುದೇ ಕೈಗಾರಿಕಾ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ ಮತ್ತು ಪತ್ರ ಸಂಖ್ಯೆ:ಭೂಸ್ವಾ(7) ಸಿ.ಆರ್/ /2020–21/ 701, ದಿನಾಂಕ:16.10.2020ರಲ್ಲಿ ಮಂಡ್ಯ ಜಿಲ್ಲೆ, ಆಲೂರು ಗ್ರಾಮದ ಸರ್ವೆ ಸಂಖ್ಯೆ:60/12ರ 01ಎ–20ಗು, 60/15ರ

0ಎ–20ಗು, 62/4ರ 0ಎ–25ಗು ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಇದುವರೆವಿಗೂ ಯಾವುದೇ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ದಿನಾಂಕ:19.12.2020 ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಸದರಿ ಜಮೀನುಗಳ ಉತ್ತರಕ್ಕೆ ಹಾಲಿ 15.0ಮೀ ಅಗಲದ ರಾಜ್ಯ ಹೆದ್ದಾರಿಯಿಂದ ಸಂಪರ್ಕ ಹೊಂದಿದ್ದು ಹಾಗೂ ಪ್ರಸ್ತಾಪಿತ ಜಮೀನುಗಳಿಂದ ಸುಮಾರು 150ರಿಂದ 200ಮೀಟರ್ ಅಂತರದಲ್ಲಿ ಡಿ.ಹೊಸೂರು ಗ್ರಾಮದ ವಸತಿ ಬೆಳವಣಿಗೆಗಳು ಇರುತ್ತವೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು **ದಿನಾಂಕಃ 03.02.2021ರಂದು "ವಿಜಯ ಕರ್ನಾಟಕ" ಮತ್ತು "ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್"** ದಿನಪತ್ರಿಕೆಗಳಲ್ಲಿ ಪ್ರಕಟಿಸಿ, ಸದರಿ ಪ್ರಕಟಣೆಯಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಹಾಗಾಗಿ, ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಪ್ರಸ್ತಾಪಿತ ಜಮೀನುಗಳಿಗೆ ಹೊಂದಿಕೊಂಡಿರುವ ರಾಜ್ಯ ಹೆದ್ದಾರಿಗೆ ನಿಯಮಾನುಸಾರ ರಸ್ತೆ ಮಾರ್ಜಿನ್ ಹಾಗೂ ಕಟ್ಟಡ ರೇಖೆ ಕಾಯ್ದಿರಿಸುವ ಷರತ್ತಿಗೊಳಪಟ್ಟು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಆಲೂರು ಗ್ರಾಮದ ಸರ್ವೆ ಸಂಖ್ಯೆ:60/12ರ 01ಎ–20ಗು, 60/15ರ 0ಎ–20ಗು, 62/4ರ 0ಎ–25ಗು, 203/1ರ 0ಎ–30ಗು, 203/2ರ 02ಎ–10ಗು, 203/3ರ 01ಎಕರೆ, 203/4ರ 01ಎಕರೆ, 218ರ 01ಎ–25ಗು, 219ರ 01ಎಕರೆ, 220ರ 01ಎಕರೆ, 221ರ 0ಎ–35ಗು ಒಟ್ಟು 12ಎ–05ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ಶೈಕ್ಷಣಿಕ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಆಲೂರು ಗ್ರಾಮದ ಸರ್ವೆ ಸಂಖ್ಯೆ:60/12ರ 01ಎ–20ಗು, 60/15ರ 0ಎ–20ಗು, 62/4ರ 0ಎ–25ಗು, 203/1ರ 0ಎ–30ಗು, 203/2ರ 02ಎ–10ಗು. 203/3ರ 01ಎಕರೆ, 203/4ರ 01ಎಕರೆ, 218ರ 01ಎ–25ಗು, 219ರ 01ಎಕರೆ, 220ರ 01ಎಕರೆ, 221ರ 0ಎ–35ಗು ಒಟ್ಟು 12ಎ–05ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸದರಿ ಜಮೀನುಗಳ ಉತ್ತರಕ್ಕೆ ಹಾಲಿ 15.0ಮೀ ಅಗಲದ ರಾಜ್ಯ ಹೆದ್ದಾರಿಯಿಂದ ಸಂಪರ್ಕ ಹೊಂದಿದ್ದು ಹಾಗೂ ಪ್ರಸ್ತಾಪಿತ ಜಮೀನುಗಳಿಂದ ಸುಮಾರು 150ರಿಂದ 200ಮೀಟರ್ ಅಂತರದಲ್ಲಿ ಡಿ.ಹೊಸೂರು ಗ್ರಾಮದ ವಸತಿ ಬೆಳವಣಿಗೆಗಳು ಬಂದಿರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಿ ಅಭಿವೃದ್ಧಿಗಳ ವಿಸ್ತರಣೆಗಾಗಿ ಕಾಯ್ದಿರಿಸಬೇಕಾದ ಪ್ರದೇಶದಲ್ಲಿ ಅಳವಡಿಸಿಕೊಳ್ಳಬಹುದಾಗಿರುವುದನ್ನು ಮತ್ತು ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕೆಐಎಡಿಬಿ, ಕೆಐಎಡಿಬಿ(ಬಿಎಂಐಸಿಪಿ)ರವರು ಮಾಹಿತಿ ನೀಡಿರುವುದನ್ನು ಹಾಗೂ ಪ್ರಸ್ತಾವನೆಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ ಸ್ವೀಕೃತಿಯಾಗಿಲ್ಲದೇ ಇರುವುದನ್ನು ಸಭೆಯು ಗಮನಿಸಿತು. ಈ ಹಿನ್ನಲೆಯಲ್ಲಿ, ಪ್ರಸ್ತಾಪಿತ ಜಮೀನುಗಳಿಗೆ ಹೊಂದಿಕೊಂಡಿರುವ ರಾಜ್ಯ ಹೆದ್ದಾರಿಗೆ ನಿಯಮಾನುಸಾರ ರಸ್ತೆ ಮಾರ್ಜಿನ್ ಹಾಗೂ ಕಟ್ಟಡ ರೇಖೆ ಕಾಯ್ದಿರಿಸುವ ಷರತ್ತಿಗೊಳಪಟ್ಟು ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಕಸಬಾ

ಹೋಬಳಿ, ಆಲೂರು ಗ್ರಾಮದ ಸರ್ವೆ ಸಂಖ್ಯೆ:60/12ರ 01ಎ–20ಗು, 60/15ರ 0ಎ–20ಗು, 62/4ರ 0ಎ–25ಗು, 203/1ರ 0ಎ–30ಗು, 203/2ರ 02ಎ–10ಗು, 203/3ರ 01ಎಕರೆ, 203/4ರ 01ಎಕರೆ, 218ರ 01ಎ–25ಗು, 219ರ 01ಎಕರೆ, 220ರ 01ಎಕರೆ, 221ರ 0ಎ–35ಗು ಒಟ್ಟು 12ಎ–05ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ಶೈಕ್ಷಣಿಕ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖೇನ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) **ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:180/3ರ 0ಎ–06ಗು, 180/6ರ 0ಎ–30ಗು, 180/7ರ 0ಎ–14ಗು, 180/8ರ 0ಎ–20ಗು, 180/9ರ 0ಎ–32ಗು, 180/10ರ 0ಎ–32ಗು, 180/11ರ 0ಎ–06ಗು ಮತ್ತು ಸರ್ವೆ ಸಂಖ್ಯೆ:181/8ರ 0ಎ–29ಗು ಒಟ್ಟು 04ಎ–09ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಸೈಯದ್ ಸಿದ್ದಿಖ್ ಅಹಮದ್ ಮತ್ತು ಇತರರು ಸಲ್ಲಿಸಿರುವ ಮನವಿ ಕುರಿತು**

*****

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:180/3ರ 0ಎ–06ಗು, 180/6ರ 0ಎ–30ಗು, 180/7ರ 0ಎ–14ಗು, 180/8ರ 0ಎ–20ಗು, 180/9ರ 0ಎ–32ಗು, 180/10ರ 0ಎ–32ಗು, 180/11ರ 0ಎ–06ಗು ಮತ್ತು ಸರ್ವೆ ಸಂಖ್ಯೆ:181/8ರ 0ಎ–29ಗು ಒಟ್ಟು 04ಎ–09ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರಾದ ಶ್ರೀ ಸೈಯದ್ ಸಿದ್ದಿಖ್ ಅಹಮದ್ ಮತ್ತು ಇತರರು ಅರ್ಜಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನುಗಳನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ವಿಭೂಸ್ವಾ–2/ ಬಿಎಂಐಸಿಪಿ/ಸಿಆರ್:/60/2020–21, ದಿನಾಂಕ:13.02.2021ರಲ್ಲಿ **"ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:180/3ರ 0ಎ–06ಗು, 180/6ರ 0ಎ–30ಗು, 180/7ರ 0ಎ–14ಗು, 180/8ರ 0ಎ–20ಗು, 180/9ರ 0ಎ–32ಗು, 180/10ರ 0ಎ–32ಗು, 180/11ರ 0ಎ–06ಗು ಮತ್ತು ಸರ್ವೆ ಸಂಖ್ಯೆ:181/8ರ 0ಎ–29ಗು ಒಟ್ಟು 04ಎ–09ಗು ವಿಸ್ತೀರ್ಣದ ಜಮೀನುಗಳಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ"** ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ, ಕ.ಕೈ.ಪ್ರ.ಮಂ, ವಲಯ ಕಛೇರಿ, ಮೈಸೂರು ರವರ ಪತ್ರ ಸಂಖ್ಯೆ: ಭೂಸ್ವಾ(7)ಸಿ.ಆರ್/ /2020–21/1332, ದಿನಾಂಕ:17.02.2021ರಲ್ಲಿ **"ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:180/3ರ 0ಎ–06ಗು, 180/6ರ 0ಎ–30ಗು, 180/7ರ 0ಎ–14ಗು, 180/8ರ 0ಎ–20ಗು, 180/9ರ 0ಎ–32ಗು, 180/10ರ 0ಎ–32ಗು, 180/11ರ 0ಎ–06ಗು ಮತ್ತು ಸರ್ವೆ ಸಂಖ್ಯೆ:181/8ರ 0ಎ–29ಗು ಒಟ್ಟು 04ಎ–09ಗು ವಿಸ್ತೀರ್ಣದ ಜಮೀನುಗಳು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಇದುವರೆವಿಗೂ ಯಾವುದೇ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ"** ಎಂದು ತಿಳಿಸಿರುತ್ತಾರೆ.

ದಿನಾಂಕ:17.02.2021ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಇದೇ ಗ್ರಾಮದ ಸರ್ವೆ ಸಂಖ್ಯೆ:141/3, 180/1, 180/4, 180/5 ಮತ್ತು ಸರ್ವೆ ಸಂಖ್ಯೆ:181/2ರ ಒಟ್ಟು 06ಎ–24ಗು ಜಮೀನುಗಳು ಸರ್ಕಾರದ ಆದೇಶ ಸಂಖ್ಯೆ: ನಅಇ 288 ಮೈಅಪ್ರಾ 2020 (ಇ), ಬೆಂಗಳೂರು, ದಿನಾಂಕ:21.01.2021 ಮತ್ತು ಪ್ರಾಧಿಕಾರದ

ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ:ಬಿಎಂಐಸಿಎಪಿಎ/ಭೂಉಬ–03/39/2019–20/1109, ದಿನಾಂಕ:01.02.2021ರಂತೆ ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿದ್ದು, ಭೂ ಉಪಯೋಗ ಬದಲಾವಣೆಯಾಗಿರುವ ಜಮೀನುಗಳಿಗೆ ಪ್ರಶ್ನಿತ ಜಮೀನುಗಳು ಹೊಂದಿಕೊಂಡಿರುತ್ತದೆ. ಭೂ ಉಪಯೋಗ ಬದಲಾವಣೆಯಾಗಿರುವ ಜಮೀನಿನ ಪಶ್ಚಿಮಕ್ಕೆ 12.0ಮೀ ಅಗಲದ ಜಿಲ್ಲಾ ಮುಖ್ಯ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಸದರಿ ಎಲ್ಲಾ ಜಮೀನುಗಳನ್ನು ನಿಯಮಾನುಸಾರ ರಸ್ತೆ ಸಂಪರ್ಕ ಕಲ್ಪಿಸಿಕೊಂಡು ಜಂಟಿಯಾಗಿ ಅಭಿವೃದ್ಧಿಪಡಿಸುವುದಾಗಿ ಎಲ್ಲಾ ಜಮೀನುಗಳ ಮಾಲೀಕರುಗಳು ಜಂಟಿ ಅಭಿವೃದ್ಧಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ21.02.2021ರಂದು "ವಿಜಯವಾಣಿ" ಮತ್ತು "ದಿ ಹಿಂದೂ" ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ಆಹ್ವಾನಿಸಿ, ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಒಂದು (01) ಆಕ್ಷೇಪಣೆ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುತ್ತದೆ.

ಅರುಣ್ ಕುಮಾರ್ ಅಗರ್‌ವಾಲ್, ವಕೀಲರು ಇವರು ದಿನಾಂಕ:02.03.2021 (ಸ್ವೀಕೃತಿ ದಿನಾಂಕ:05.03.2021)ರಂದು ಆಕ್ಷೇಪಣೆ ಸಲ್ಲಿಸಿ ಕೆಲವೊಂದು ಅಂಶಗಳನ್ನು ಪ್ರಸ್ತಾಪಿಸುತ್ತಾ, ಉದ್ಯಾನವನ ಮತ್ತು ಬಯಲುಜಾಗ ವಲಯದಲ್ಲಿ ಭೂ ಉಪಯೋಗ ಬದಲಾವಣೆ ಮಾಡಬಾರದೆಂದು ಘನ ಸರ್ವೋಚ್ಚ ನ್ಯಾಯಾಲಯದ ಆದೇಶ ಇರುವುದರಿಂದ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಹಾಯೋಜನೆಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಬಾರದೆಂದು ಘನ ಉಚ್ಚ ನ್ಯಾಯಾಲಯದ ಆದೇಶವಿರುವುದರಿಂದ ಹಾಗೂ ನ್ಯಾಯಾಲಯದ ಆದೇಶ ಉಲ್ಲಂಘನೆಯಾಗುವುದರಿಂದ, ಪ್ರಸ್ತಾವನೆಯನ್ನು ಪರಿಗಣಿಸಬಾರೆದೆಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

ಆದರೆ, ಪ್ರಸ್ತಾವನೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ 01 ಆಕ್ಷೇಪಣೆ ಸ್ವೀಕೃತವಾಗಿರುವ ಹಿನ್ನಲೆಯಲ್ಲಿ ಸದರಿ ಆಕ್ಷೇಪಣೆಯನ್ನು ಸಭೆಯ ಅವಗಾಹನೆಗೆ ತರುತ್ತಾ, ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಈ ಹಿಂದೆ ಭೂ ಉಪಯೋಗ ಬದಲಾವಣೆಯಾಗಿರುವ ಜಮೀನುಗಳನ್ನು ಮತ್ತು ಪ್ರಸ್ತಾಪಿತ ಜಮೀನುಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವ ಷರತ್ತಿಗೊಳಪಡಿಸಿ, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:180/3ರ 0ಎ–06ಗು, 180/6ರ 0ಎ–30ಗು, 180/7ರ 0ಎ–14ಗು, 180/8ರ 0ಎ–20ಗು, 180/9ರ 0ಎ–32ಗು, 180/10ರ 0ಎ–32ಗು, 180/11ರ 0ಎ–06ಗು ಮತ್ತು ಸರ್ವೆ ಸಂಖ್ಯೆ:181/8ರ 0ಎ–29ಗು ಒಟ್ಟು 04ಎ–09ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:180/3ರ 0ಎ–06ಗು, 180/6ರ 0ಎ–30ಗು, 180/7ರ 0ಎ–14ಗು, 180/8ರ 0ಎ–20ಗು, 180/9ರ 0ಎ–32ಗು, 180/10ರ 0ಎ–32ಗು, 180/11ರ 0ಎ–06ಗು ಮತ್ತು ಸರ್ವೆ ಸಂಖ್ಯೆ:181/8ರ 0ಎ–29ಗು ಒಟ್ಟು 04ಎ–09ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಶ್ನಿತ ಜಮೀನು

ಹಾಗೂ ಸರ್ಕಾರದ ಆದೇಶ ಸಂಖ್ಯೆ: ನಅಇ 288 ಮೈಅಪ್ರಾ 2020 (ಇ), ಬೆಂಗಳೂರು, ದಿನಾಂಕ:21.01.2021 ಮತ್ತು ಪ್ರಾಧಿಕಾರದ ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ಸಂಖ್ಯೆ:ಬಿಎಂಐಸಿಎಪಿಎ/ ಭೂಉಬ–03/39/2019–20/1109, ದಿನಾಂಕ:01.02.2021ರಲ್ಲಿ ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿರುವ ಜಮೀನುಗಳಿಗೆ ಪ್ರಶ್ನಿತ ಜಮೀನುಗಳು ಹೊಂದಿಕೊಂಡಿರುತ್ತದೆ. ಭೂ ಉಪಯೋಗ ಬದಲಾವಣೆಯಾಗಿರುವ ಜಮೀನಿನ ಪಶ್ಚಿಮಕ್ಕೆ 12.0ಮೀ ಅಗಲದ ಜಿಲ್ಲಾ ಮುಖ್ಯ ರಸ್ತೆಯಿಂದ ಸಂಪರ್ಕವಿರುತ್ತದೆ. ಭೂಉಪಯೋಗ ಬದಲಾವಣೆಯಾಗಿರುವ ಜಮೀನುಗಳು ಹಾಗೂ ಪ್ರಶ್ನಿತ ಜಮೀನುಗಳನ್ನು ಒಟ್ಟಾರೆಯಾಗಿ ಅಭಿವೃದ್ಧಿಪಡಿಸುವುದಾಗಿ ಪ್ರಮಾಣ ಪತ್ರ ಸಲ್ಲಿಸಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಸ್ವೀಕೃತವಾಗಿರುವ ಒಂದು (01) ಆಕ್ಷೇಪಣೆಯಲ್ಲಿನ ಅಂಶಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿ ಆಕ್ಷೇಪಣೆಯು ಸಮಂಜಸವಾಗಿಲ್ಲದ ಕಾರಣ, ಆಕ್ಷೇಪಣೆಯನ್ನು ತಳ್ಳಿ ಹಾಕಲು ಸಭೆಯಲ್ಲಿ ನಿರ್ಣಯಿಸಲಾಯಿತು. ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಿ ಅಭಿವೃದ್ಧಿಗಳ ವಿಸ್ತರಣೆಗಾಗಿ ಕಾಯ್ದಿರಿಸಬೇಕಾದ ಪ್ರದೇಶದಲ್ಲಿ ಅಳವಡಿಸಿಕೊಳ್ಳಬಹುದಾಗಿರುವುದನ್ನು ಮತ್ತು ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕೆಐಎಡಿಬಿ, ಕೆಐಎಡಿಬಿ(ಬಿಎಂಐಸಿಪಿ)ರವರು ಮಾಹಿತಿ ನೀಡಿರುವುದನ್ನು ಸಭೆಯು ಗಮನಿಸಿತು. ಈ ಹಿಂದೆ ಭೂ ಉಪಯೋಗ ಬದಲಾವಣೆಯಾಗಿರುವ ಜಮೀನುಗಳನ್ನು ಮತ್ತು ಪ್ರಸ್ತಾಪಿತ ಜಮೀನುಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವ ಷರತ್ತಿಗೊಳಪಡಿಸಿ, ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ:180/3ರ 0ಎ–06ಗು, 180/6ರ 0ಎ–30ಗು, 180/7ರ 0ಎ–14ಗು, 180/8ರ 0ಎ–20ಗು, 180/9ರ 0ಎ–32ಗು, 180/10ರ 0ಎ–32ಗು, 180/11ರ 0ಎ–06ಗು ಮತ್ತು ಸರ್ವೆ ಸಂಖ್ಯೆ:181/8ರ 0ಎ–29ಗು ಒಟ್ಟು 04ಎ–09ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) **ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:288/3 (ಹಳೆ ಸರ್ವೆ ಸಂಖ್ಯೆ:132)ರಲ್ಲಿ 0ಎ–22¼ಗು ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀಮತಿ ಪಿ.ಸುಗಂಧವೇಣಿ ಕೋಂ ಲೇಟ್ ಆರ್.ಪುರುಷೋತ್ತಮನ್ ಇವರು ಸಲ್ಲಿಸಿರುವ ಮನವಿ ಕುರಿತು**

******

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:288/3 (ಹಳೆ ಸರ್ವೆ ಸಂಖ್ಯೆ:132)ರಲ್ಲಿ 0ಎ–22¼ಗು ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುಮೋದನೆಗೊಂಡ **ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ.** ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನಿಗೆ 9.0ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಇದ್ದು, ಜಮೀನು ಖಾಲಿ ಇರುತ್ತದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ಇವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್ಎಕ್ಯೂ(1)/ಸಿ.ಆರ್:/273/2018–19, ದಿನಾಂಕ:19.11.2018ರಲ್ಲಿ "ಬೆಂಗಳೂರು ದಕ್ಷಿಣ ತಾಲ್ಲೂಕು,

ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:288/3(ಹಳೆ ನಂ:132)ರ ಒಟ್ಟು 04ಎಕರೆ ವಿಸ್ತೀರ್ಣದ ಜಮೀನಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ–2, ಕೆಐಎಡಿಬಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಬೆಂಗಳೂರು/ವಿಭೂಸ್ವಾಅ–2/2107/ 2018–19, ದಿನಾಂಕ:15.11.2018ರಲ್ಲಿ "ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:288/3(ಹಳೆ ನಂ:132)ರ ಒಟ್ಟು 04ಎಕರೆ ವಿಸ್ತೀರ್ಣದ ಜಮೀನು ಈ ಕಛೇರಿಯಿಂದ ಭೂಸ್ವಾಧೀನಪಡಿಸಲು ಅಧಿಸೂಚನೆಯನ್ನು ಹೊರಡಿಸಿರುವುದು ಕಂಡುಬರುತ್ತಿಲ್ಲ" ಎಂದು ತಿಳಿಸಿರುತ್ತಾರೆ.

ಈ ಹಿಂದೆ ಅರ್ಜಿದಾರರು ದಿನಾಂಕ:04.10.2018ರ ಮನವಿಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:288/3 (ಹಳೆ ಸರ್ವೆ ಸಂಖ್ಯೆ:132)ರ 03ಎ–02¾ಗು ಜಮೀನಿಗೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಕೋರಿರುವ ಸಂಬಂಧ ದಿನಾಂಕ:08.07.2019ರಂದು ಜರುಗಿದ ಪ್ರಾಧಿಕಾರದ 63ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:12 ರಲ್ಲಿ ವಿಷಯವನ್ನು ಮಂಡಿಸಲಾಗಿ, ಪ್ರಸ್ತಾಪಿತ ಜಮೀನಿನಲ್ಲಿ ಇರುವ ನಾಲಾಗೆ ಎನ್.ಜಿ.ಟಿ ಆದೇಶದಂತೆ Tertiary ನಾಲಾಗೆ 25ಮೀ ಬಫರ್ ಅಳವಡಿಸಿ ಉಳಿಕೆ 03ಎ–02¾ಗು ವಿಸ್ತೀರ್ಣದ ಜಮೀನಿಗೆ ಸಭೆಯ ತೀರ್ಮಾನದಂತೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ದಿನಾಂಕ:05.08.2019ರಂದು ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಪ್ರಸ್ತುತ ಅರ್ಜಿದಾರರು ಮನವಿ ಸಲ್ಲಿಸಿ, ಪ್ರಸ್ತಾಪಿತ ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:288/3ರ 04ಎ–06ಗು (06ಗುಂಟೆ ಖರಾಬು) ಪೈಕಿ 37¼ಗು ಜಮೀನನ್ನು ನಾಲಾ ಬಫರ್‌ಗಾಗಿ ಕಾಯ್ದಿರಿಸಿ, ಉಳಿಕೆ 03ಎ–02¾ಗು ಜಮೀನಿಗೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಲಾಗಿರುತ್ತದೆ. ಆದರೆ ಇದೀಗ ಎನ್.ಜಿ.ಟಿ ಆದೇಶವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಜಾ ಮಾಡಿರುವುದರಿಂದ, ನಾಲಾ ಬಫರ್‌ಗಾಗಿ ಕಾಯ್ದಿರಿಸಿರುವ 0ಎ–37¼ಗು ಜಮೀನಿನಲ್ಲಿ ಚಾಲ್ತಿಯಲ್ಲಿರುವ ನಿಯಮಗಳಂತೆ ಸದರಿ ನಾಲಾಗೆ ಬಫರ್ ಕಾಯ್ದಿರಿಸಿ, ಉಳಿಕೆ ಜಮೀನಿಗೆ ಭೂ ಉಪಯೋಗ ಬದಲಾವಣೆ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಪರಿಶೀಲಿಸಲಾಗಿ, ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ದಿನಾಂಕ:04.05.2016ರ ಆದೇಶದ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:05.03.2019ರ ಆದೇಶದಲ್ಲಿ ಸದರಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಆದೇಶವನ್ನು Set aside ಮಾಡಿರುತ್ತದೆ. ದಿನಾಂಕ:07.09.2020ರಂದು ಜರುಗಿದ ಪ್ರಾಧಿಕಾರದ 65ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:VII(2)ರಲ್ಲಿ Tertiary ನಾಲಾಗೆ 10ಮೀ ಬಫರ್ ಅಳವಡಿಸಲು ಸಭೆಯು ತೀರ್ಮಾನಿಸಿರುತ್ತದೆ. ಅದರಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:288/3 (ಹಳೆ ಸರ್ವೆ ಸಂಖ್ಯೆ:132)ರ 04ಎಕರೆ ಪೈಕಿ ಈಗಾಗಲೇ ಭೂ ಉಪಯೋಗ ಬದಲಾವಣೆ ಸಂಬಂಧ 03ಎ–02¾ಗು ಜಮೀನಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಉಳಿಕೆ 0ಎ–37¼ಗು ಪೈಕಿ ನಾಲಾಗೆ 10ಮೀ ಬಫರ್ ಅಳವಡಿಸಿದಲ್ಲಿ 0ಎ–15ಗು ಬಫರ್‌ಗಾಗಿ ಕಾಯ್ದಿರಿಸಬೇಕಿದ್ದು, ಉಳಿಕೆ 0ಎ–22¼ಗು ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿರುತ್ತದೆ.

ಅರ್ಜಿದಾರರು ದಿನಾಂಕ:16.12.2020ರಲ್ಲಿ ಅಫಿಡವಿಟ್ ಸಲ್ಲಿಸಿ, ಈ ಹಿಂದೆ ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:288/3ರ 03ಎ–02¾ಗು ಜಮೀನಿಗೆ ಹಾಗೂ ಪ್ರಸ್ತುತ ಭೂ ಉಪಯೋಗ ಬದಲಾವಣೆ ಕೋರಿರುವ ಸದರಿ ಸರ್ವೆ ಸಂಖ್ಯೆ ಜಮೀನಿನ 0ಎ–22¼ಗು, ಒಟ್ಟು 03ಎ–25ಗು ಜಮೀನಿಗೆ ಒಟ್ಟಾರೆಯಾಗಿ ವಿನ್ಯಾಸ ಅನುಮೋದನೆ ಪಡೆಯುವುದಾಗಿ ಪ್ರಮಾಣೀಕರಿಸಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕಃ 31.12.2020ರಂದು "ವಿಜಯವಾಣಿ" ಮತ್ತು " ನ್ಯೂ ಇಂಡಿಯನ್ ಎಕ್ಸ್‌ಪೆಸ್" ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ಆಹ್ವಾನಿಸಿ, ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಹಾಗಾಗಿ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾಪಿತ ಜಮೀನಿಗೆ 9.0ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕ ಇದ್ದು, ಜಮೀನು ಖಾಲಿ ಇದ್ದು, ಪ್ರಸ್ತಾಪಿತ ಸರ್ವೆ ಸಂಖ್ಯೆ:288/3ರ 0ಎ-22¼ಗು ಜಮೀನನ್ನು, ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಿ ಅಭಿವೃದ್ಧಿಗಳ ವಿಸ್ತರಣೆಗಾಗಿ ಕಾಯ್ದಿರಿಸಬೇಕಾದ ಪ್ರದೇಶದಲ್ಲಿ ಅಳವಡಿಸಿಕೊಳ್ಳಲು ಅವಕಾಶವಿರುತ್ತದೆ. ಆದ್ದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ತಾಳೆ ಹೊಂದುತ್ತಿರುವುದರಿಂದ ಹಾಗೂ ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಕಛೇರಿಗಳಿಂದ ಮಾಹಿತಿಯನ್ನು ನೀಡಿರುವುದರಿಂದ ಮತ್ತು ಪ್ರಸ್ತಾವಿತ ಜಮೀನಿಗೆ ಸಂಬಂಧಿಸಿದಂತೆ ಕೆಟಿಸಿಪಿ ಕಾಯ್ದೆ 1961ರ ಕಲಂ 14(ಎ)ರನ್ವಯ ಸಾರ್ವಜನಿಕರಿಂದ ಆಕ್ಷೇಪಣೆ ಕರೆಯಲಾಗಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವ ಹಿನ್ನಲೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:288/3 (ಹಳೆ ಸರ್ವೆ ಸಂಖ್ಯೆ:132)ರಲ್ಲಿ 0ಎ-22ಳಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಸ್ತಾಪಿತ ಜಮೀನಿಗೆ 9.0ಮೀ ಅಗಲದ ಸಾರ್ವಜನಿಕ ರಸ್ತೆ ಸಂಪರ್ಕವಿದ್ದು ಹಾಗೂ ಜಮೀನಿನ ಸುತ್ತಮುತ್ತಲೂ ಅಭಿವೃದ್ಧಿಗಳು ಬಂದಿರುವುದರಿಂದ, ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ, ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ, ಅರ್ಜಿದಾರರು ಕೋರಿರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:288/3 (ಹಳೆ ಸರ್ವೆ ಸಂಖ್ಯೆ:132)ರಲ್ಲಿ 0ಎ-22¼ಗು ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

V **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕೆ.ಟಿ.ಸಿ.ಪಿ (ತಿದ್ದುಪಡಿ) ಕಾಯ್ದೆ 2015 ಕಲಂ 69(3)ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಪ್ರಕರಣಗಳು**

1) **ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:93/2ರ 0ಎ–25ಗು ಮತ್ತು ಸರ್ವೆ ಸಂಖ್ಯೆ:93/3ರ 0ಎ–20ಗು ಒಟ್ಟು 01ಎ–05ಗು ವಿಸ್ತೀರ್ಣದ ಜಮೀನನ್ನು ಉದ್ಯಾನವನ ಮತ್ತು ಬಯಲುಜಾಗ ವಲಯದಿಂದ ವಸತಿ ಉದ್ದೇಶಕ್ಕೆ ಕೆ.ಟಿ.ಸಿ.ಪಿ (ತಿದ್ದುಪಡಿ) ಕಾಯ್ದೆ 2015 ಕಲಂ 69(3)ರಡಿಯಲ್ಲಿ ಭೂ ಉಪಯೋಗ ನಿಗಧಿಪಡಿಸಲು ಕೋರಿ ಶ್ರೀ ಎಂ.ಎನ್.ಪ್ರಿಯದತ್ತ ಬಿನ್ ಎಂ.ನಾರಾಯಣದಾಸ್ ಹಾಗೂ ಮಾಮಿಡಿ ಮೋಹನ್ ರೆಡ್ಡಿ ಬಿನ್ ಲೇಟ್ ವೆಂಕಟರೆಡ್ಡಿ ಇವರುಗಳು ಸಲ್ಲಿಸಿರುವ ಮನವಿ ಕುರಿತು**

*****

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:93/2ರ 0ಎ–25ಗು ಮತ್ತು ಸರ್ವೆ ಸಂಖ್ಯೆ:93/3ರ 0ಎ–20ಗು ಒಟ್ಟು 01ಎ–5ಗು ವಿಸ್ತೀರ್ಣದ ಜಮೀನನ್ನು ಉದ್ಯಾನವನ ಮತ್ತು ಬಯಲುಜಾಗ ವಲಯದಿಂದ ವಸತಿ ಉದ್ದೇಶಕ್ಕೆ ಕೆ.ಟಿ.ಸಿ.ಪಿ (ತಿದ್ದುಪಡಿ) ಕಾಯ್ದೆ 2015 ಕಲಂ 69(3)ರಡಿಯಲ್ಲಿ ಭೂ ಉಪಯೋಗ ನಿಗಧಿಪಡಿಸಲು ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುಮೋದನೆಗೊಂಡ **ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಸ್ತಾಪಿತ 01ಎ–05ಗು ವಿಸ್ತೀರ್ಣದ ಜಮೀನಿನ ಪೈಕಿ 01ಎ–01½ಗು ಜಮೀನನ್ನು ಉದ್ಯಾನವನ ಮತ್ತು ಬಯಲುಜಾಗ ವಲಯದಲ್ಲಿ ಹಾಗೂ 3½ಗು ಜಮೀನನ್ನು ನೈಸ್ ರಸ್ತೆ ಬಫರ್‌ಗಾಗಿ** ಕಾಯ್ದಿರಿಸಲಾಗಿರುತ್ತದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ ಎಲ್ ಎಕ್ಯೂ(1)/ಸಿ.ಆರ್:/45/2016–17 ದಿನಾಂಕ:24/25.05.2016ರಲ್ಲಿ "ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:93ರಲ್ಲಿ 01ಎ–05ಗು ಜಮೀನಿಗೆ ಕೆ.ಐ.ಎ.ಡಿ ಕಾಯ್ದೆ ಕಲಂ 28(1) ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, ಈ ಪೈಕಿ 0ಎ–35ಗು ಜಮೀನಿಗೆ ಕೆ.ಐ.ಎ.ಡಿ ಕಾಯ್ದೆ ಕಲಂ 28(4)ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಉಳಿಕೆ ಜಮೀನಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ನಂತರ, ಪತ್ರ ಸಂಖ್ಯೆ:ಬಿಎಂಐಸಿಎಪಿಎ/ ಎಲ್‌ಎಕ್ಯೂ(1)/ಸಿ.ಆರ್:/104/2017–18, ದಿನಾಂಕ:10.07.2017ರ ಪತ್ರದೊಂದಿಗೆ ಸರ್ವೆ ಸಂಖ್ಯೆ:93ರ ಜಮೀನಿಗೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಅಂತಿಮ ಅಧಿಸೂಚನೆ ಹೊರಡಿಸಿರುವ ಪ್ರದೇಶವನ್ನು ತೋರಿಸುವ ಭೂ ಸ್ವಾಧೀನದ ಬಾಬ್ತು ನಕ್ಷೆಯನ್ನು ಲಗತ್ತಿಸಿದ್ದು, ಅದರಂತೆ ಪ್ರಸ್ತಾಪಿತ ಸಂಖ್ಯೆ:93/2ರ 0ಎ–25ಗು ಮತ್ತು ಸರ್ವೆ ಸಂಖ್ಯೆ:93/3ರ 0ಎ–20ಗು ಒಟ್ಟು 01ಎ–05ಗು ಜಮೀನು ಭೂಸ್ವಾಧೀನಕ್ಕೆ ಒಳಪಡದೇ ಇರುವುದು ಕಂಡುಬಂದಿರುತ್ತದೆ. ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ, ಬೆಂಗಳೂರು ರವರ ಪತ್ರ ಸಂಖ್ಯೆ:ಬೆಂಗಳೂರು/ವಿಭೂಸ್ವಾಅ/592/2016–17, ದಿನಾಂಕ:27.05.2016ರಲ್ಲಿ "ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:93/3ರ 0ಎ–20ಗು ವಿಸ್ತೀರ್ಣದ ಜಮೀನು ಈ ಕಛೇರಿಯ ವತಿಯಿಂದ ಯಾವುದೇ ಯೋಜನೆಗೂ ಭೂಸ್ವಾಧೀನಕ್ಕೆ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಗರ ಗ್ರಾಮ ಪಂಚಾಯಿತಿ ರವರು ದಿನಾಂಕ:19.10.2020ರ ಪತ್ರದಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ಉಪಯೋಗದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಂಡು ಭೂ ಪರಿವರ್ತನೆ ಆದೇಶ ಪಡೆದು ಅಭಿವೃದ್ಧಿಪಡಿಸಿದರೆ, ಪ್ರಸ್ತಾಪಿತ ಪ್ರದೇಶಕ್ಕೆ ಗ್ರಾಮ

ಪಂಚಾಯಿತಿ ವತಿಯಿಂದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಮತ್ತು ಸದರಿ ಜಮೀನಿಗೆ 30ಅಡಿ (9ಮೀಟರ್) ಸಾರ್ವಜನಿಕ ರಸ್ತೆ ಸಂಪರ್ಕ ಇರುತ್ತದೆ ಎಂದು ದೃಢೀಕರಿಸಿರುತ್ತಾರೆ.

ಅರ್ಜಿದಾರರು ದಿನಾಂಕ:12.02.2021ರ ಜಂಟಿ ಅಭಿವೃದ್ಧಿ ಪ್ರಮಾಣ ಪತ್ರದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:93/2ರಲ್ಲಿ 0ಎ–25ಗು ಮತ್ತು ಸರ್ವೆ ಸಂಖ್ಯೆ:93/3ರಲ್ಲಿ 0ಎ–20ಗು ಒಟ್ಟು 01ಎ–05ಗು ಜಮೀನುಗಳು ತಮ್ಮ ಹೆಸರುಗಳಲ್ಲಿ ಶುದ್ಧ ಕ್ರಯಪತ್ರಗಳು ನೋಂದಣಿಯಾಗಿದ್ದು, ಹಾಲಿ ತಮ್ಮ ಸ್ವಂತ ಸ್ವಾಧೀನಾನುಭವದಲ್ಲಿರುವುದಾಗಿ ತಿಳಿಸುತ್ತಾ, ತಮ್ಮ ಸಂಪೂರ್ಣ ಹಕ್ಕು–ಬಾಧ್ಯತೆಗಳಿಗೆ ಒಳಪಟ್ಟಿರುವ ಜಮೀನುಗಳನ್ನು ಉದ್ಯಾನವನ ಮತ್ತು ಬಯಲುಜಾಗ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬಲಾವಣೆ ಮಾಡಿಸಿಕೊಂಡು ಪ್ರಾಧಿಕಾರದ ವಲಯ ನಿಯಮಾವಳಿಗಳ ರೀತ್ಯಾ ವಸತಿ ವಿನ್ಯಾಸವನ್ನು ಅನುಮೋದಿಸಿಕೊಳ್ಳುವ ಸಲುವಾಗಿ ಹಾಗೂ ಜಂಟಿಯಾಗಿ ಅಭಿವೃದ್ಧಿಪಡಿಸುವ ಸಲುವಾಗಿ ತಮ್ಮ ಸಂಪೂರ್ಣ ಜಮೀನಿಗೆ ಸಮಗ್ರವಾಗಿ ವಿನ್ಯಾಸ ರಚಿಸಿ, ರಸ್ತೆ, ಉದ್ಯಾನವನ, ನಾಗರೀಕ ಸೌಲಭ್ಯ ಹಾಗೂ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಲು ಮತ್ತು ತಮ್ಮಗಳ ಜಮೀನಿನಲ್ಲಿ ಒಂದು ಜಮೀನಿನಿಂದ ಇನ್ನೊಂದು ಜಮೀನಿಗೆ ರಸ್ತೆ ಸಂಪರ್ಕಗಳನ್ನು ಬಿಟ್ಟುಕೊಡಲು ಒಪ್ಪಿರುವುದಾಗಿ ಪ್ರಮಾಣೀಕರಿಸಿರುತ್ತಾರೆ ಹಾಗೂ ಸದರಿ ವಿನ್ಯಾಸದ ಅನುಮೋದನೆಗೆ ಸಂಬಂಧಿಸಿದಂತೆ, ಎಲ್ಲಾ ಪತ್ರ ವ್ಯವಹಾರಗಳಿಗೂ ಮನೆ ನಂ:6/67, 47ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು–560082, ಈ ವಿಳಾಸವನ್ನು ಉಭಯತ್ತರ ಪರವಾಗಿ ಪತ್ರ ವ್ಯವಹಾರಗಳಿಗೆ ಅಂಚೆ ವಿಳಾಸವಾಗಿ ಬಳಸಲು ತೀರ್ಮಾನಿಸಿರುತ್ತೇವೆ ಹಾಗೂ ಮೇಲಿನ ಅಂಶಗಳಿಗೆ ಸಂಬಂಧಿಸಿದ ಯಾವುದೇ ತಂಟೆ ತಕರಾರು ಬಂದಲ್ಲಿ, ತಾವೇ ಜವಾಬ್ದಾರರಾಗಿರುವುದಾಗಿ ಹಾಗೂ ತಾವೇ ಸರಿಪಡಿಸಿಕೊಳ್ಳುವುದಾಗಿ ಸಹ ತಿಳಿಸಿರುತ್ತಾರೆ.

ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಪ್ರಸ್ತಾಪಿತ ಜಮೀನುಗಳಿಗೆ ಇರುವ ರಸ್ತೆಯು ಮಣ್ಣಿನ ರಸ್ತೆಯಾಗಿರುತ್ತದೆ. ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪ ವಿಭಾಗ, ಬೆಂಗಳೂರು ರವರು ಆದೇಶ ಸಂಖ್ಯೆ: ಎಲ್.ಎನ್.ಡಿ/ (ಎಸ್)/ ಸಿ.ಆರ್:117/2020–21, ದಿನಾಂಕ:18.01.2021ರಲ್ಲಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಮತ್ತು ಭೂ ಮಾಪಕರು ಸ್ಥಳ ಪರಿಶೀಲನೆ ಮಾಡಿ (9ಮೀ) 30ಅಡಿ ಸಾರ್ವಜನಿಕ ಸಂಪರ್ಕ ರಸ್ತೆ ಇರುತ್ತದೆ ಎಂದು ದಿನಾಂಕ:30–08–2020ರ ಪತ್ರದಲ್ಲಿ ತಿಳಿಸಿರುವುದಾಗಿ ತಿಳಿಸುತ್ತಾ, 9ಮೀಟರ್ ಅಗಲದ ಜಮೀನನ್ನು ಸಾರ್ವಜನಿಕ ಉಪಯೋಗಕ್ಕಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 69ರ ಅಡಿಯಲ್ಲಿ ಸಾರ್ವಜನಿಕ ಉದ್ದೇಶಕ್ಕೆ ರಸ್ತೆಗಾಗಿ ಜಮೀನನ್ನು ಕಾಯ್ದಿರಿಸಲು ಆದೇಶಿಸಿರುತ್ತಾರೆ.

ಪ್ರಸ್ತಾವನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರ ಕಲಂ 69(3)ರನ್ವಯ ಉದ್ಯಾನವನ ಮತ್ತು ಬಯಲುಜಾಗ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗಧಿಪಡಿಸುವ ಕೋರಿಕೆಯನ್ನು ದಿನಾಂಕಃ13.02.2021ರಂದು ಹೊಸದಿಗಂತ ಮತ್ತು ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆ/ಸಲಹೆಗಳನ್ನು ಆಹ್ವಾನಿಸಿ, ಸಾರ್ವಜನಿಕ ಪ್ರಕಟಣೆ ನೀಡಲಾಗಿತ್ತು. ಪ್ರಕಟಣೆಯಲ್ಲಿ ನಿಗಧಿಪಡಿಸಿರುವ ನಿಗಧಿತ ಅವಧಿಯಲ್ಲಿ ಒಂದು (01) ಆಕ್ಷೇಪಣೆ ಸ್ವೀಕೃತವಾಗಿರುತ್ತದೆ.

ಶ್ರೀ ಕೆ.ಮಲ್ಲಿಕಾರ್ಜುನರಾಜು, ಯೂತ್ ಫಾರ್ ಹ್ಯೂಮನ್ ರೈಟ್ಸ್ ರವರು ದಿನಾಂಕ:15.02.2021ರಂದು ಈ ಕೆಳಕಂಡಂತೆ ಆಕ್ಷೇಪಣೆ ಸಲ್ಲಿಸಿರುತ್ತಾರೆ.

1. We wish to state that, as per the observations made on 13.02.2021 in Page 05 of Deccan Herald Daily we have noticed about the notification issued by BMICAPA for submission of objections in related to survey numbers 93/2, 93/3, B.M.Kaval Village, Kengeri Hobli, Bangalore South Taluk.

2. We further wish to submit that, the said land is earmarked as Park and Open space as per the approved Bangalore - Mysur InfrastructureCorridor Planning Authority's Master plan.
3. We further wish to submit that, we have observed that the said land is going to be converted from Park and Open space to residential zone and the proposed land is connected by 9.0m Road and is surrounded by residentialdevelopments.
4. We further wish to submit that, the land owner says that the surrounding areas already developed hencc this change of land use. But, as the surrounding areas already developed there is requirement of park, open spaces, trees, etc., for people to survive as we all need good quality air and pollution free environment.
5. We further wish to submit that, we would like to know on why the said owners have decided to convert the land ear marked for Park and Open space to residential zone? What is the use of making Master Plans?
6. We further wish to submit that, we have observed that there is no details related with the total population of said area and how many people are lack of infrastructures?
7. We further wish to submit that, we have strong opinion that there is need of agriculture zones rather than residential zones as lot of agriculture lands are acquired by State and Central Governments for infrastructure works resulting in increasing in pollution levels in the society as public are depends for good quality air on these kind of lands, trees, open spaces, etc.,.
8. We further wish to submit that, as per observations made we have noted that there is some hidden agenda in this conversion and some benami people are working from behind the screens with personnel vested interests namely COMMERCE.

In conclusion, we wish to submit that, we strongly object for the said change of land use from Park, Open Space to residential zone and also wants to verify all the documents submitted by the land owners ಎಂದು ಪ್ರಸ್ತಾಪಿಸುತ್ತಾ, ಪ್ರಸ್ತಾವನೆ ಸಂಬಂಧ ಅರ್ಜಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲು ಅವಕಾಶ ಕಲ್ಪಿಸಿಕೊಡುವಂತೆ ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:93/2ರ 0ಎ–25ಗು ಮತ್ತು ಸರ್ವೆ ಸಂಖ್ಯೆ:93/3ರ 0ಎ–20ಗು ಒಟ್ಟು 01ಎ–05ಗು ಪೈಕಿ ಪ್ರಾಧಿಕಾರದ ಮಹಾಯೋಜನೆಯಲ್ಲಿ ನೈಸ್ ರಸ್ತೆ ಬಫರ್‌ಗಾಗಿ ಕಾಯ್ದಿರಿಸಿರುವ 0ಎ–3½ಗು ಜಮೀನನ್ನು ಹೊರತುಪಡಿಸಿ ಉದ್ಯಾನವನ ಮತ್ತು ಬಯಲುಜಾಗ ವಲಯದಲ್ಲಿ ಕಾಯ್ದಿರಿಸಿರುವ ಉಳಿಕೆ 01ಎ–01½ಗು ಜಮೀನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರ ಕಲಂ 69(4)ರಂತೆ ವಸತಿ ಉದ್ದೇಶಕ್ಕೆ ಭೂ ಉಪಯೋಗವನ್ನು ನಿಗಧಿಪಡಿಸಲು ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:93/2ರ 0ಎ–25ಗು ಮತ್ತು ಸರ್ವೆ ಸಂಖ್ಯೆ:93/3ರ 0ಎ–20ಗು ಒಟ್ಟು 01ಎ–05ಗು ವಿಸ್ತೀರ್ಣದ ಜಮೀನನ ಪೈಕಿ 01ಎ–01½ಗು ಜಮೀನನ್ನು ಉದ್ಯಾನವನ ಮತ್ತು ಬಯಲುಜಾಗ ವಲಯದಲ್ಲಿ ಹಾಗೂ 0ಎ– 3ಳಿಗು ಜಮೀನನ್ನು ನೈಸ್ ರಸ್ತೆ ಬಫರ್‌ಗಾಗಿ ಕಾಯ್ದಿರಿಸಲಾಗಿದ್ದು, ಪ್ರಶ್ನಿತ ಜಮೀನಿಗೆ ಹೊಂದಿಕೊಂಡಂತೆ ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ

ಉಪ ವಿಭಾಗ, ಬೆಂಗಳೂರು ರವರು ಆದೇಶ ಸಂಖ್ಯೆ:ಎಲ್.ಎನ್.ಡಿ/(ಎಸ್)/ಸಿ.ಆರ್:117/2020-21, ದಿನಾಂಕ:18.01.2021ರಲ್ಲಿ 9ಮೀಟರ್ ಅಗಲದ ಜಮೀನನ್ನು ಸಾರ್ವಜನಿಕ ಉಪಯೋಗಕ್ಕಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 69ರ ಅಡಿಯಲ್ಲಿ ಸಾರ್ವಜನಿಕ ಉದ್ದೇಶಕ್ಕೆ ರಸ್ತೆಗಾಗಿ ಕಾಯ್ದಿರಿಸಲು ಆದೇಶಿಸಲಾಗಿರುವ ರಸ್ತೆಯಿಂದ ಸಂಪರ್ಕ ಇದ್ದು, ಜಮೀನಿನ ಸುತ್ತಮುತ್ತ ವಸತಿ ಮತ್ತು ವಾಣಿಜ್ಯ ಬೆಳವಣಿಗೆಗಳು ಇರುವುದರಿಂದ, ಹಾಗೂ ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿರವರ ನಿರಾಕ್ಷೇಪಣಾ ಪತ್ರಗಳಲ್ಲಿ ಮಾಹಿತಿ ನೀಡಿರುವುದರಿಂದ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಒಂದು ಆಕ್ಷೇಪಣೆ ಸ್ವೀಕೃತವಾಗಿರುವ ಅಂಶವನ್ನು ಸಭೆಯು ಗಮನಿಸಿ, ಸದರಿ ಆಕ್ಷೇಪಣೆಯ ಅಂಶಗಳು ಸಾಮಾನ್ಯ ಅಂಶಗಳಾಗಿರುವುದರಿಂದ, ಆಕ್ಷಪಣೆಯನ್ನು ತಿರಸ್ಕರಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಪ್ರಾಧಿಕಾರದ ಮಹಾಯೋಜನೆ ಸರ್ಕಾರದಿಂದ ದಿನಾಂಕ: 12.02.2004 ರಲ್ಲಿ ಅನುಮೋದನೆಯಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರ ಕಲಂ 69(2)ರನ್ವಯ ಪ್ರಸ್ತಾಪಿತ ಜಮೀನನ್ನು ಮಾಹಾಯೋಜನೆ ಅನುಮೋದನೆಯಾಗಿ 05 ವರ್ಷಗಳೊಳಗೆ ಭೂಸ್ವಾಧೀನಪಡಿಸಿಕೊಂಡಿಲ್ಲವಾದ್ದರಿಂದ ಅಥವಾ ಭೂಸ್ವಾಧೀನಪಡಿಸಿಕೊಳ್ಳಲು ಕ್ರಮವಹಿಸಿಲ್ಲವಾದ್ದರಿಂದ ಸದರಿ ಭೂ ಉಪಯೋಗ ರದ್ದಾಗಿರುವುದರಿಂದ, ಪ್ರಸ್ತಾವನೆಯು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರ ಕಲಂ 69(4)ರನ್ವಯ ಪ್ರಸ್ತಾಪಿತ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸರ್ವೆ ಸಂಖ್ಯೆ:93/2ರ 0ಎ-25ಗು ಮತ್ತು ಸರ್ವೆ ಸಂಖ್ಯೆ:93/3ರ 0ಎ-20ಗು ಒಟ್ಟು 01ಎ-05ಗು ವಿಸ್ತೀರ್ಣದ ಜಮೀನನ ಪೈಕಿ 0ಎ- 3ಳಿಗು ಜಮೀನನ್ನು ನೈಸ್ ರಸ್ತೆ ಬಫರ್‌ಗಾಗಿ ಕಾಯ್ದಿರಿಸಿ ಉಳಿಕೆ 01ಎ-01ಳಿಗು ಜಮೀನನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 69(4)ರನ್ವಯ ಉದ್ಯಾನವನ ಮತ್ತು ಬಯಲುಜಾಗ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗಧಿಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

VI ಇತರೆ ವಿಷಯಗಳು

1) ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ (ಸಿ.ಎ) ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಯೋಜನಾ ಪ್ರಾಧಿಕಾರಗಳಿಂದ ಅನುಮೋದನೆಯಾಗಿರುವ ವಸತಿ ಬಡಾವಣೆಯಲ್ಲಿನ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು ಸರ್ಕಾರದ ಅಧಿಸೂಚನೆ ಸಂಖ್ಯೆ:UDD 27 TTP 2016, ದಿನಾಂಕ:24.05.2017ರಲ್ಲಿ ನಿಯಮಗಳನ್ನು ಹೊರಡಿಸಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:UDD 27 TTP 2016, ದಿನಾಂಕ:24.05.2017ರಲ್ಲಿ ಯೋಜನಾ ಪ್ರಾಧಿಕಾರಗಳಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಕೇಂದ್ರ, ರಾಜ್ಯ ಸರ್ಕಾರಿ ಇಲಾಖೆಗಳಿಗೆ, ಸ್ಥಳೀಯ ಸಂಸ್ಥೆ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸದರಿ ಅಧಿಸೂಚನೆಯ ನಿಯಮ 6(1) ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

After the exhaustion of the requirements and fulfilling the demand of Civic Amenity sites for the purposes under sub clause (1) and (2) of clause (c) of sub-rule (1) of rule 2, the Authority may. having regard to the particular type of Civic Amenity purposes under sub-clause (3) of clause (c) of sub rule (1) of rule 2 required to be provided in any layout,

offer such remaining Civic Amenity sites for the purposes of allotment on lease basis to an institution as specified in these rules

Provided that the authority shall offer such Civic Amenity sites to an institution not exceeding ten percent of the total Civic Amenity sites available within the Local Planning Area.

ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದಿಂದ ನೀಡಿರುವ ಅನುಮೋದಿತ ವಸತಿ ಬಡಾವಣೆಗಳಲ್ಲಿ ಸುಮಾರು 43 ವಿವಿಧ ಅಳತೆಗಳ ನಾಗರೀಕ ಸೌಲಭ್ಯ ನಿವೇಶನಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಳ್ಳಲಾಗಿದ್ದು, ಸರ್ಕಾರದ ಆದೇಶದಲ್ಲಿನ ನಿಯಮಗಳ ಅನುಸಾರ ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಕೇಂದ್ರ, ರಾಜ್ಯ ಸರ್ಕಾರಿ ಇಲಾಖೆಗಳಿಗೆ, ಸ್ಥಳೀಯ ಸಂಸ್ಥೆ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡುವ ಕುರಿತು ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸರ್ಕಾರದ ಅಧಿಸೂಚನೆ ಸಂಖ್ಯೆ:UDD 27 TTP 2016, ದಿನಾಂಕ:24.05.2017ರಂತೆ ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಕೇಂದ್ರ, ರಾಜ್ಯ ಸರ್ಕಾರಿ ಇಲಾಖೆಗಳಿಗೆ, ಸ್ಥಳೀಯ ಸಂಸ್ಥೆ ಅಥವಾ ಅರೆ ಸರ್ಕಾರಿ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಪತ್ರಿಕಾ ಪ್ರಕಟಣೆ ಹೊರಡಿಸಲು ಹಾಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಪತ್ರ ಬರೆಯಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) **ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾದಾವರ ಗ್ರಾಮದ ಸರ್ವೆ ಸಂಖ್ಯೆ:105/1ರಲ್ಲಿ 01ಎ–10ಗು ಮತ್ತು ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:42/2ಎರಲ್ಲಿ 01ಎ–02ಗು ವಿಸ್ತೀರ್ಣದ ಜಮೀನುಗಳನ್ನು ಸೇರಿಸಿ ಅಭಿವೃದ್ಧಿಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಏಕ ಯೋಜನೆ ಮಂಜೂರಾತಿ ಪಡೆಯುವ ಕುರಿತು ಪ್ರಾಧಿಕಾರದ ಅಭಿಪ್ರಾಯ ಕೋರಿರುವ ಬಗ್ಗೆ.**

*****

ಸರ್ಕಾರದ ಪತ್ರ ಸಂಖ್ಯೆ: ನಅಇ 14 ಬೆಂಅಸೇ 2021 (ಇ) ದಿನಾಂಕ:20.02.2021 (ಸ್ವೀಕೃತ ದಿನಾಂಕ: 22.02.2021) ರಲ್ಲಿ ಶ್ರೀ ಸುದರ್ಶನ್ ಕುಮಾರ್ ಆರ್ಯ ಬೆಂಗಳೂರು ಇವರು Economic Transport Organisation Ltd., ರವರ ಪರವಾಗಿ ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ:20.01.2021ರ ಮನವಿಯನ್ನು ಉಲ್ಲೇಖಿಸುತ್ತಾ, ಸದರಿ ಮನವಿದಾರರು ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಮಾದಾವರ ಗ್ರಾಮದ ಸರ್ವೆ ಸಂಖ್ಯೆ:105/1ರಲ್ಲಿ 01ಎ–10ಗು ಮತ್ತು ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:42/2ಎ ರಲ್ಲಿ 01ಎ–02ಗು ವಿಸ್ತೀರ್ಣದ ಜಮೀನುಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಮತ್ತು ಈ ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವುದಾಗಿ ತಿಳಿಸಿದ್ದು, ಸದರಿ ಜಮೀನುಗಳನ್ನು ಒಟ್ಟಾರೆಯಾಗಿ ಅಭಿವೃದ್ಧಿಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಯೋಜನಾ ನಕ್ಷೆ ಅನುಮೋದನೆ ದೊರಕಿಸಿಕೊಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಿರುವುದಾಗಿ ತಿಳಿಸುತ್ತಾ, ಸದರಿ ಮನವಿಯಲ್ಲಿನ ಅಂಶಗಳ ಕುರಿತು ನಿಯಮಾನುಸಾರ ಪರಿಶೀಲಿಸಿ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ನಿರ್ದೇಶಿಸಲಾಗಿದೆ. ಸದರಿ ಸರ್ಕಾರದ ಪತ್ರದೊಂದಿಗೆ ಪ್ರಸ್ತಾಪಿತ ಜಮೀನಿಗೆ ಸಂಬಂಧಿಸಿದಂತೆ, ಆರ್.ಟಿ.ಸಿ., ಇ.ಸಿ., ಎಂ.ಆರ್, ಮತ್ತು ಇತರೆ ದಾಖಲೆಗಳನ್ನು ಲಗತ್ತಿಸಿದ್ದು, ಆದರೆ ಪ್ರಸ್ತಾಪಿತ ಜಮೀನಿಗೆ ಸಂಬಂಧಿಸಿದಂತೆ, ಸರ್ವೆ ನಕ್ಷೆಯನ್ನು ಕಳುಹಿಸಿರುವುದಿಲ್ಲ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಹೊರಡಿಸಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 130 ಬೆಂರೂಪ್ರಾ 2001, ಬೆಂಗಳೂರು, ದಿನಾಂಕ: 20.11.2001 (ಪರಿಷ್ಕೃತ) ರಂತೆ ಬೆಂಗಳೂರು ಉತ್ತರ ತಾಲ್ಲೂಕು,

ದಾಸನಪುರ ಹೋಬಳಿ, ಮಾದಾವರ ಗ್ರಾಮದ ಸ.ನಂ. 105/1ರಲ್ಲಿ 01ಎ–10ಗು ಪ್ರದೇಶವು ಈ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಒಳಪಟ್ಟಿರುವುದಿಲ್ಲ ಹಾಗೂ ಸದರಿ ಅಧಿಸೂಚನೆಯಂತೆ ಮಾದನಾಯಕನಹಳ್ಳಿ ಪೂರ್ತಿ ಗ್ರಾಮವು ಈ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಒಳಪಟ್ಟಿರುತ್ತದೆ. ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:42/2ಎ ರಲ್ಲಿನ 01ಎ–02ಗು ಜಮೀನಿಗೆ ಸಂಬಂಧಿಸಿದಂತೆ ಸರ್ವೆ ನಕ್ಷೆಯನ್ನು ಕಳುಹಿಸದೇ ಇರುವುದರಿಂದ ಪ್ರಾಧಿಕಾರದ ಅನುಮೋದಿತ ಮಹಾಯೋಜನೆಯಲ್ಲಿ ಗುರುತಿಸಲು ಸಾಧ್ಯವಾಗಿರುವುದಿಲ್ಲ. ಮಾದನಾಯಕನಹಳ್ಳಿ ಗ್ರಾಮದ ಗ್ರಾಮ ನಕ್ಷೆಯನ್ನು ಪ್ರಾಧಿಕಾರದ ಮಹಾಯೋಜನೆಯಲ್ಲಿ ತಾಳೆ ಮಾಡಿ ಪರಿಶೀಲಿಸಲಾಗಿ, ಸರ್ವೆ ನಂ. 42ರ ಪೂರ್ಣ ಜಮೀನಿನ ಎಲ್ಲೆಯನ್ನು ಪ್ರಾಧಿಕಾರದ ಮಹಾಯೋಜನೆಯಲ್ಲಿ ಸರಿಯಾಗಿ ಗುರುತಿಸದೇ ಇದ್ದು, ಕಾರ್ಟೋಗ್ರಾಫಿಕಲ್ ಎರರ್ ಆಗಿರುವುದು ಕಂಡುಬಂದಿರುತ್ತದೆ. ಪ್ರಾಧಿಕಾರದ ಮಹಾಯೋಜನೆಯಲ್ಲಿ ಗುರುತಿಸಿರುವಂತೆ ಸರ್ವೆ ನಂ. 42ರ ಜಮೀನಿನ ಎಲ್ಲೆಯ ಪೈಕಿ ಭಾಗಶ: ಪ್ರದೇಶವನ್ನು ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಭಾಗಶ: ಪ್ರದೇಶವನ್ನು ಸಾರಿಗೆ ಮತ್ತು ಸಂಪರ್ಕ ವಲಯದಲ್ಲಿ (ಸ.ನಂ. 42 ರ ಜಮೀನಿಗೆ ಹೊಂದಿಕೊಂಡಂತೆ ಹಾದುಹೋಗಿರುವ ರಾ.ಹೆ–04 ಅನ್ನು ಅಗಲೀಕರಣಗೊಳಿಸಲು ಪ್ರಸ್ತಾಪಿಸಲಾಗಿದೆ) ಕಾಯ್ದಿರಿಸಲಾಗಿರುತ್ತದೆ.

ಮುಂದುವರೆದು, ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಜಲಾನಯನ ಪ್ರದೇಶದ ಅರ್ಕಾವತಿ ಮತ್ತು ಕುಮುದ್ವತಿ ನದಿಗಳ ಜಲಾನಯನ ಪ್ರದೇಶ ವ್ಯಾಪ್ತಿಯಲ್ಲಿ ಬಫರ್ ಜೋನ್ ಅನ್ನು ನಿಗಧಿಪಡಿಸುವ ಸಂಬಂಧ ಸರ್ಕಾರದ ಅಧಿಸೂಚನೆ ಸಂಖ್ಯೆ: FEE 2015 ENV 2000 ದಿನಾಂಕ: 18.11.2003 ರಲ್ಲಿ ಹೊರಡಿಸಿರುವ ಅಧಿಸೂಚನೆಯಂತೆ ಮಾದನಾಯಕನಹಳ್ಳಿ ಗ್ರಾಮದ ಸರ್ವೆ ನಂ. 42ರ ಪೂರ್ಣ ಜಮೀನು ಟಿ.ಜಿ.ಆರ್ ವಲಯ–3ರಲ್ಲಿ ಬರುತ್ತಿದ್ದು, ನಂತರ ಈ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ನಅಇ 11 ಬಿಎಂಆರ್ 2017, ಬೆಂಗಳೂರು, ದಿನಾಂಕ:20.07.2019ರಲ್ಲಿ ಹೊರಡಿಸಿರುವ ಆದೇಶದಂತೆ ಟಿ.ಜಿ.ಆರ್ ವಲಯ–3ರ ಪ್ರದೇಶವನ್ನು 1.ಕಿ.ಮೀ ನಿಂದ 500ಮೀ ವ್ಯಾಪ್ತಿಗೆ ಮಿತಿಗೊಳಿಸಿರುವುದರಿಂದ, ಮಾದನಾಯಕನಹಳ್ಳಿ ಗ್ರಾಮದ ಪ್ರಸ್ತಾಪಿತ ಸರ್ವೆ ನಂ.42/2ಎರ ಜಮೀನು ಟಿ.ಜಿ.ಆರ್ ವಲಯದಲ್ಲಿ ಒಳಗೊಂಡಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಸ್ಪಷ್ಟೀಕರಣ ಪಡೆಯಬಹುದಾಗಿರುತ್ತದೆ.

ಸರ್ಕಾರದ ಪತ್ರದೊಂದಿಗೆ ಲಗತ್ತಿಸಿರುವ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ರವರು ಪತ್ರ ಸಂಖ್ಯೆ: ಎ.ಎಲ್.ಎನ್.ಸಿ.ಆರ್/19/10–11 ದಿನಾಂಕ:08.02.2011 ರ ಪತ್ರದಲ್ಲಿ ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 42/2ಎ ರಲ್ಲಿ 01ಎ–29ಗು ಜಮೀನು ಎ.ಎಲ್.ಎನ್.200/65–66 ದಿನಾಂಕ:20.05.1966 ರಂತೆ ವ್ಯವಸಾಯೇತರ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುವುದು ಕಂಡುಬಂದಿರುವುದಾಗಿ ದೃಢೀಕರಿಸಿರುತ್ತಾರೆ. ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹಾಗೂ ಗ್ರಾಮೀಣ ಅಭಿವೃದ್ಧಿ ಸಹಾಯಕರು, ಮಾದಾವರ ಗ್ರಾಮಪಂಚಾಯಿತಿ, ಬೆಂಗಳೂರು ಉತ್ತರ ತಾಲ್ಲೂಕು ರವರು ಮಾದನಾಯಕನಹಳ್ಳಿ ಗ್ರಾಮದ ಸ.ನಂ. 42/2ಎ ರ ಸ್ವತ್ತಿಗೆ ಖಾತಾ ತೆರೆದಿರುವುದಾಗಿ ದಿನಾಂಕ:29.07.2009ರ ಪತ್ರದಲ್ಲಿ ದೃಢೀಕರಿಸಿದ್ದು, ಮುಖ್ಯಾಧಿಕಾರಿಗಳು, ಮಾದನಾಯಕನಹಳ್ಳಿ ಪುರಸಭೆ ರವರು ಸದರಿ ಜಮೀನಿನ 01ಎ–02ಗು ವಿಸ್ತೀರ್ಣಕ್ಕೆ ವಾಣಿಜ್ಯ ಉಪಯೋಗಕ್ಕೆ ನಮೂನೆ–3 ಯನ್ನು ದಾಖಲಿಸಿರುತ್ತಾರೆ.

ಸರ್ಕಾರದ ಪತ್ರದಲ್ಲಿ ಮತ್ತು ಮನವಿದಾರರ ಮನವಿಯಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಒಳಗೊಂಡಿರುವ ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:42/2ಎ ರ 01ಎ–02ಗು ವಿಸ್ತೀರ್ಣದ ಜಮೀನನ್ನು ಸೇರಿಸಿಕೊಂಡು ಬಿ.ಡಿ.ಎ. ವತಿಯಿಂದ ನಕ್ಷೆ ಅನುಮೋದನೆಯನ್ನು ದೊರಕಿಸಿಕೊಡುವ ಸಂಬಂಧ ಪ್ರಾಧಿಕಾರದ ಅಭಿಪ್ರಾಯ ಸಲ್ಲಿಸುವಂತೆ ತಿಳಿಸಿದ್ದು, ಆದರೆ ಸದರಿ ಜಮೀನನ್ನು ಯಾವ ಉದ್ದೇಶಕ್ಕೆ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಲಾಗಿದೆ ಎಂಬುದರ ಬಗ್ಗೆ ಮಾಹಿತಿ ನೀಡಿರುವುದಿಲ್ಲ. ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಪ್ರಸ್ತಾಪಿತ ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 42ರ ಜಮೀನನ್ನು ಪ್ರಾಧಿಕಾರದ ಮಹಾಯೋಜನೆಯಲ್ಲಿ ಗುರುತಿಸಿರುವಂತೆ ಭಾಗಶಃ ಸಾರಿಗೆ ಮತ್ತು ಸಂಪರ್ಕ ವಲಯ (ರಾಷ್ಟ್ರೀಯ ಹೆದ್ದಾರಿ–4ರ ಅಗಲೀಕರಣಕ್ಕೆ ಪ್ರಸ್ತಾಪಿಸಿರುವುದರಿಂದ)ದಲ್ಲಿ ಕಾಯ್ದಿರಿಸಿರುವ ಪ್ರದೇಶದಲ್ಲಿ ಯಾವುದೇ

ಬೆಳವಣಿಗೆಗಳಿಗೆ ಅನುಮತಿಸಲು ಅವಕಾಶವಿರುವುದಿಲ್ಲ ಹಾಗೂ ಭಾಗಶಃ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಿರುವ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದ ವಲಯ ನಿಯಮಾವಳಿಗಳಲ್ಲಿ ಕ್ರಮ ಸಂಖ್ಯೆ:3.06ರಲ್ಲಿ ವ್ಯವಸಾಯ ವಲಯದಲ್ಲಿ ಅನುಮತಿಸಲು ಅವಕಾಶ ಕಲ್ಪಿಸಿರುವ ಉದ್ದೇಶಗಳಿಗೆ Table-5.8 ರ ಪ್ರಕಾರ ಕನಿಷ್ಠ 01 ಹೆಕ್ಟೇರ್ ವಿಸ್ತೀರ್ಣದ ಅವಶ್ಯಕತೆ ಇರುತ್ತದೆ. ಆದರೆ ಮನವಿದಾರರ ಮನವಿಯಲ್ಲಿ ಮತ್ತು ಸರ್ಕಾರದ ಪತ್ರದಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ 01ಎ–02ಗು ವಿಸ್ತೀರ್ಣದ ಜಮೀನನ್ನು ಸೇರಿಸಿಕೊಂಡು ಏಕ ಯೋಜನೆ ಮಂಜೂರಾತಿ ಪಡೆಯಲು ಉದ್ದೇಶಿಸಿರುವುದಾಗಿ ತಿಳಿಸಿದ್ದು, ಸದರಿ ವಿಸ್ತೀರ್ಣವು ಪ್ರಾಧಿಕಾರದ ವಲಯ ನಿಯಮಾವಳಿಗಳಂತೆ ವ್ಯವಸಾಯ ವಲಯದಲ್ಲಿ ಅನುಮತಿಸಲು ನಿಗಧಿಪಡಿಸಿರುವ ಕನಿಷ್ಠ ವಿಸ್ತೀರ್ಣಕ್ಕಿಂತ ಕಡಿಮೆ ಇರುವುದರಿಂದ ಸದರಿ ವಿಸ್ತೀರ್ಣದಲ್ಲಿ ಪ್ರಾಧಿಕಾರದ ವಲಯ ನಿಯಮಾವಳಿಗಳಂತೆ ವ್ಯವಸಾಯ ವಲಯದಲ್ಲಿ ನಿಗಧಿಪಡಿಸಿರುವ ಯಾವುದೇ ಉದ್ದೇಶಕ್ಕೆ ಅನುಮತಿಸಲು ಅವಕಾಶವಿರುವುದಿಲ್ಲ ಎಂಬ ಅಂಶಗಳನ್ನು ಸರ್ಕಾರದ ಅವಗಾಹನೆಗೆ ಸಲ್ಲಿಸಬಹುದಾಗಿದ್ದು, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು, ಸರ್ಕಾರದಿಂದ ಅನುಮೋದನೆಯಾಗಿರುವ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಮಹಾಯೋಜನೆಯಲ್ಲಿ ಮಾದನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:42ರ ಪೂರ್ಣ ಜಮೀನನ್ನು ಭಾಗಶಃ ಸಾರಿಗೆ ಮತ್ತು ಸಂಪರ್ಕ ವಲಯ ಹಾಗೂ ವ್ಯವಸಾಯ ವಲಯಗಳಲ್ಲಿ ಕಾಯ್ದಿರಿಸಲಾಗಿದ್ದು, ಪ್ರಾಧಿಕಾರದ ಅನುಮೋದಿತ ವಲಯ ನಿಯಮಾವಳಿಗಳಂತೆ ಸದರಿ ವಲಯಗಳಲ್ಲಿ ಅರ್ಜಿದಾರರು ಕೋರಿರುವ ಉದ್ದೇಶಕ್ಕೆ ಅನುಮತಿಸಲು ಅವಕಾಶವಿರುವುದಿಲ್ಲ. ಹಾಗಾಗಿ, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಒಳಪಟ್ಟಿರುವ ಮಾದನಾಯಕನಹಳ್ಳಿ ಗ್ರಾಮದ ಪ್ರಸ್ತಾಪಿತ ಜಮೀನನ್ನು ಸೇರಿಸಿಕೊಂಡು ಒಟ್ಟಾರೆಯಾಗಿ ಅಭಿವೃದ್ಧಿಪಡಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಏಕ ಯೋಜನೆ ಮಂಜೂರಾತಿ ಪಡೆಯಲು ಅವಕಾಶವಿರುವುದಿಲ್ಲ ಎಂಬ ಅಂಶವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) **ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿನ ನಿವೇಶನಗಳಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಪ್ರಾಧಿಕಾರದ ಅನುಮೋದನೆ ಪಡೆದು ಮತ್ತು ಪಡೆಯದೇ ಇರುವ ಕೆಲವೊಂದು ವಸತಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಸದರಿ ಬಡಾವಣೆಯಲ್ಲಿನ ನಿವೇಶನಗಳಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ಕೋರಿ ಪ್ರಸ್ತಾವನೆಗಳು ಸ್ವೀಕೃತವಾಗುತ್ತಿರುತ್ತವೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 69 ಮೈಅಪ್ರಾ 2019, ಬೆಂಗಳೂರು, ದಿನಾಂಕ:23.02.2021ರಲ್ಲಿ "ಕರ್ನಾಟಕ ಗೃಹ ಮಂಡಳಿಯು 2000ನೇ ಸಾಲಿನಿಂದ ದಿನಾಂಕ:14.06.2017ರವರೆಗೆ ವಿವಿಧ ವಸತಿ ಕಾರ್ಯಕ್ರಮಗಳ ಅಡಿಯಲ್ಲಿ ಅಭಿವೃದ್ಧಿಪಡಿಸಿ ನಗರಾಭಿವೃದ್ಧಿ ಪ್ರಾಧಿಕಾರ, ಯೋಜನಾ ಪ್ರಾಧಿಕಾರ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಅನುಮೋದನೆ ಪಡೆಯದೆ ಪೂರ್ಣಗೊಳಿಸಿರುವ ಮತ್ತು ಅನುಷ್ಠಾನಗೊಳಿಸಿ ಪೂರ್ಣಗೊಳ್ಳುವ ಹಂತದಲ್ಲಿರುವ ಯಥಾಸ್ಥಿತಿ ನಕ್ಷೆಗಳಿಗೆ, ಕರ್ನಾಟಕ ಗೃಹ ಮಂಡಳಿಯು ನಿಯಮಾನುಸಾರ ಪಾವತಿಸಬೇಕಾದ ಶುಲ್ಕವನ್ನು, ಕೆರೆ ಪುನರುಜ್ಜೀವನ ಶುಲ್ಕದೊಂದಿಗೆ ಕಡ್ಡಾಯವಾಗಿ ಪಾವತಿಸುವ ಷರತ್ತಿಗೊಳಪಟ್ಟು, ಒಂದು ಬಾರಿಯ ಕ್ರಮವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಘಟನೋತ್ತರ ಅನುಮೋದನೆ ನೀಡಲಾಗಿದೆ. ಅದರಂತೆ, ಸಂಬಂಧಪಟ್ಟ ಮಹಾಯೋಜನೆಯಲ್ಲಿ ಅಳವಡಿಸಿಕೊಳ್ಳತಕ್ಕದ್ದು" ಎಂದು ಆದೇಶಿಸಿರುತ್ತದೆ.

ಹಾಗಾಗಿ ಸರ್ಕಾರದ ಆದೇಶದಂತೆ, ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಪ್ರಾಧಿಕಾರದ ಅನುಮೋದನೆ ಪಡೆಯದೇ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿನ ನಿವೇಶನಗಳಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕುಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ***ಕರ್ನಾಟಕ ಗೃಹ ಮಂಡಳಿ ವತಿಯಿಂದ*** *ಅಭಿವೃದ್ಧಿಪಡಿಸಿರುವ ಎಲ್ಲಾ ವಿನ್ಯಾಸದಲ್ಲಿನ ನಿವೇಶನಗಳಲ್ಲಿ ಕಟ್ಟಡ ಪರವಾನಿಗೆ ಸಂಬಂಧ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರ/ ತಾಂತ್ರಿಕ ಅಭಿಪ್ರಾಯವನ್ನು ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಅದರಂತೆ ಕ್ರಮವಹಿಸಲು ಸದಸ್ಯ ಕಾರ್ಯದರ್ಶಿಗಳಿಗೆ ತಿಳಿಸಲಾಯಿತು.*

VII ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳು

1) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಿಲ್ಲಕೆಂಪನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:48/4ರ ಒಟ್ಟು 02ಎಕರೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಗುರುಚನ್ನಬಸಪ್ಪ.ಹೆಚ್.ಎ ಬಿನ್ ಲೇಟ್ ವೀರಭದ್ರಪ್ಪ.ಕೆ.ಎ ರವರು ಸಲ್ಲಿಸಿರುವ ಮನವಿ ಕುರಿತು.

******

ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಿಲ್ಲಕೆಂಪನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:48/4ರ ಒಟ್ಟು 02ಎಕರೆ ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರು ಅರ್ಜಿ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುಮೋದನೆಗೊಂಡ **ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ಭಾಗಶಃ ವಸತಿ ಮತ್ತು ಭಾಗಶಃ ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ.**

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ಎಲ್ಎಕ್ಯೂ(2)/ಸಿ.ಆರ್:/05/2020–21, ದಿನಾಂಕ:21.10.2020ರಲ್ಲಿ " ಬಿಲ್ಲಕೆಂಪನಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್ ಜಮೀನುಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಐ/196/ಎಸ್‌ಪಿಕ್ಯೂ/98, ದಿನಾಂಕ:19.12.1998ರಲ್ಲಿ ಕೆಐಎಡಿ ಕಾಯ್ದೆ ಕಲಂ 28(1)ರ ಪ್ರಕಾರ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ, ಆದರೆ ಈ ತಹಲ್‌ವರೆವಿಗೂ ಕೆಐಎಡಿ ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ. ಮುಂದುವರೆದು, ಈ ಕಛೇರಿಯಲ್ಲಿ ಲಭ್ಯವಿರುವ ದಾಖಲೆ/ಅಧಿಸೂಚನೆಗಳನ್ನು ಪರಿಶೀಲಿಸಲಾಗಿ ಬಿಎಂಐಸಿ ಯೋಜನೆಗೆ ತಾವು ಕೋರಿರುವ ಬಿಲ್ಲಕೆಂಪನಹಳ್ಳಿ ಗ್ರಾಮದ ಸರ್ವೆ ಸಂಕ್ಯೆ:48/4ರಲ್ಲಿ 02ಎಕರೆ ವಿಸ್ತೀರ್ಣದ ಜಮೀನಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ವರದಿ ನೀಡಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ, ಬೆಂಗಳೂರು ರವರ ಪತ್ರ ಸಂಖ್ಯೆ: ಕೆಐಎಡಿಬಿ/ಎಲ್ಎಕ್ಯೂ/1136/2020–21, ದಿನಾಂಕ:20.11.2020ರಲ್ಲಿ " ರಾಮನಗರ ಜಿಲ್ಲೆ/ ತಾಲ್ಲೂಕು, ಬಿಡದಿ ಹೋಬಳಿ, ಬಿಲ್ಲಕೆಂಪನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:48/4ರಲ್ಲಿನ 02ಎಕರೆ ಜಮೀನಿನ ಸಂಬಂಧ ದಿನಾಂಕ:17.11.2020ರಂದು ಭೂ ಮಾಪಕರು ನೀಡಿರುವ ವರದಿ ಹಾಗೂ ಸರ್ಕಾರದಿಂದ ಹೊರಡಿಸಲಾಗಿರುವ ಕೆಐಎಡಿ ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆ ಸಂಖ್ಯೆ: ಸಿಐ 23 ಎಸ್‌ಪಿಕ್ಯೂ 2007, ದಿನಾಂಕ:04.10.2007ರನ್ವಯ ಭೂಸ್ವಾಧೀನವಾಗಿರುವುದು ಕಂಡುಬಂದಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ರವರ ಪತ್ರ ಸಂಖ್ಯೆ: ಮಂ.ಗ್ರಾ.ಪಂ:/20–21, ದಿನಾಂಕ:02.09.2020ರಲ್ಲಿ ಕೆಲವು ನಿಬಂಧನೆಗಳನ್ನು ವಿಧಿಸಿ ಪ್ರಸ್ತಾಪಿತ ಜಮೀನಿಗೆ ಮೂಲಭೂತ ಸೌಕರ್ಯಗಳನ್ನು ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ಒದಗಿಸಿಕೊಡುವ ಸಂಬಂಧ ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ. ಹಾಗೂ ಪ್ರಶ್ನಿತ ಜಮೀನಿಗೆ ಬೆಂಗಳೂರು ಮೈಸೂರು ರಾಷ್ಟ್ರೀಯ ಹೆದ್ದಾರಿಯಿಂದ ಮಂಚನಾಯಕನಹಳ್ಳಿ ಗ್ರಾಮದ ಕಡೆಗೆ ಹೋಗುವ 10ಮೀ ಅಗಲದ ರಸ್ತೆಯನ್ನು ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿಪಡಿಸಿದೆ ಎಂದು ದೃಢೀಕರಿಸಿರುತ್ತಾರೆ

ದಿನಾಂಕ:18.12.2020ರಂದು ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಜಮೀನಿನ ದಕ್ಷಿಣ ದಿಕ್ಕಿನಲ್ಲಿ ಸುಮಾರು 7.6ಮೀ–7.8ಮೀ ಅಗಲದ ಕಾಂಕ್ರೀಟ್ ರಸ್ತೆ ಇರುವುದು ಕಂಡುಬಂದಿದ್ದು, ಸದರಿ ಕಾಂಕ್ರೀಟ್ ರಸ್ತೆಯಿಂದ ಪ್ರಸ್ತಾಪಿತ ಜಮೀನಿಗೆ ರಸ್ತೆ ಸಂಪರ್ಕವಿರುತ್ತದೆ. ಪ್ರಶ್ನಿತ ಜಮೀನಿನಿಂದ ಸುಮಾರು 50 ರಿಂದ 100ಮೀ ಅಂತರದಲ್ಲಿ ಬಿಲ್ಲಕೆಂಪನಹಳ್ಳಿ ಗ್ರಾಮದ ಬೆಳವಣಿಗೆಗಳು ಮತ್ತು ಸುಮಾರು 100 ರಿಂದ 150ಮೀ ಅಂತರದಲ್ಲಿ ಚಿಕ್ಕ ಬಿಲ್ಲಕೆಂಪನಹಳ್ಳಿ ಗ್ರಾಮದ ಬೆಳವಣಿಗೆಗಳು ಕಂಡುಬಂದಿರುತ್ತವೆ.

ಪ್ರಶ್ನಿತ ಜಮೀನಿಗೆ ಹಾಲಿ ಇರುವ ಸಾರ್ವಜನಿಕ ರಸ್ತೆಯ ಅಗಲವನ್ನು ಪರಿಶೀಲಿಸಿ ಸರ್ವೆ ನಕ್ಷೆಯನ್ನು ದೃಢೀಕರಿಸಿ ಸಲ್ಲಿಸುವಂತೆ ದಿನಾಂಕ:06.01.2021ರ ಈ ಕಛೇರಿ ಪತ್ರದಲ್ಲಿ ತಹಶೀಲ್ದಾರ್ ರಾಮನಗರ ತಾಲ್ಲೂಕು ರವರಿಗೆ ಮಾಹಿತಿ ಕೋರಲಾಗಿತ್ತು. ಅದರಂತೆ ತಹಶೀಲ್ದಾರ್ ರಾಮನಗರ ತಾಲ್ಲೂಕು ರವರು ದಿನಾಂಕ:28.01.2021ರ ಪತ್ರದೊಂದಿಗೆ ಸರ್ವೆ ನಕ್ಷೆಯನ್ನು ಲಗತ್ತಿಸಿ, ಸರ್ವೆ ಸಂಖ್ಯೆ:48/4ರ ಜಮೀನಿನಲ್ಲಿ 0ಎ–02ಗು ಖರಾಬು ಇದ್ದು, ಜಮೀನಿನ ಕಾಲುದಾರಿಯು ಸರ್ವೆ ನಕ್ಷೆಯಂತೆ ಪ್ರಸ್ತುತ 10ಮೀ ಅಗಲಕ್ಕೆ ಅಭಿವೃದ್ಧಿಯಾಗಿದೆ ಎಂದು ಸರ್ವೆ ನಕ್ಷೆಯಲ್ಲಿ ನಮೂದಿಸಿ ದೃಢೀಕರಿಸಿ ಸಲ್ಲಿಸಿರುತ್ತಾರೆ.

ದಿನಾಂಕ:12.10.2012ರಲ್ಲಿ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಅನುಮೋದಿತ ಮಹಾಯೋಜನೆಯಂತೆ ಸರ್ವೆ ಸಂಖ್ಯೆ:48/4ರ ಒಟ್ಟು 02ಎಕರೆ ಜಮೀನಿನ ಪೈಕಿ ವಸತಿ ವಲಯದಲ್ಲಿ ಬರುತ್ತಿರುವ 0ಎ–25ಗು ಜಮೀನನ್ನು ಹೊರತುಪಡಿಸಿ, ವ್ಯವಸಾಯ ವಲಯದಲ್ಲಿ ಬರುವ 01ಎ–15ಗು ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಪ್ರಸ್ತಾವನೆಯನ್ನು ದಿನಾಂಕಃ17.02.2021ರಂದು "ಹೊಸದಿಗಂತ" ಮತ್ತು "ಡೆಕ್ಕನ್ ಹೆರಾಲ್ಡ್" ದಿನಪತ್ರಿಕೆಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ, ಪತ್ರಿಕೆ ಪ್ರಕಟಣೆ ನೀಡಲಾಗಿದೆ. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯು ದಿನಾಂಕ:04.03.2021ರಂದು ಮುಕ್ತಾಯಗೊಂಡಿದ್ದು, ಸದರಿ ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗಿರುವುದಿಲ್ಲ.

ಹಾಗಾಗಿ, ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಿಲ್ಲಕೆಂಪನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:48/4ರ ಒಟ್ಟು 02ಎಕರೆ ಪೈಕಿ 01ಎ–15ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರು ಪ್ರಸ್ತಾಪಿತ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಿಲ್ಲಕೆಂಪನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:48/4ರ ಒಟ್ಟು 02ಎಕರೆ ವಿಸ್ತೀರ್ಣದ ಜಮೀನಿಗೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿದ್ದು, ಸರ್ಕಾರದಿಂದ ಅನುಮೋದನೆಯಾಗಿರುವ

ಮಹಾಯೋಜನೆಯಲ್ಲಿ ಸರ್ವೆ ಸಂಖ್ಯೆ:48/4ರ ಒಟ್ಟು 02ಎಕರೆ ಜಮೀನಿನ ಪೈಕಿ 1ಎ–15ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಲ್ಲಿ ಮತ್ತು 0ಎ–25ಗು ವಿಸ್ತೀರ್ಣದ ಜಮೀನನ್ನು ವಸತಿ ವಲಯದಲ್ಲಿ ಕಾಯ್ದಿರಿಸಲಾಗಿದೆ. ಪ್ರಸ್ತಾಪಿತ ಜಮೀನಿಗೆ 10ಮೀ ಅಗಲದ ರಸ್ತೆ ಸಂಪರ್ಕವಿದ್ದು, ಈ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ರವರು ದೃಢೀಕರಣ ಪತ್ರ ನೀಡಿರುತ್ತಾರೆ ಸದರಿ ಜಮೀನಿನಿಂದ ಸುಮಾರು 100 ರಿಂದ 150ಮೀ ಅಂತರದಲ್ಲಿ ವಸತಿ ಬೆಳವಣಿಗೆಗಳು ಬಂದಿರುತ್ತವೆ. ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿರವರ ನಿರಾಕ್ಷೇಪಣಾ ಪತ್ರಗಳಲ್ಲಿ ಮಾಹಿತಿ ನೀಡಿರುತ್ತಾರೆ. ಹಾಗಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಸ್ವೀಕೃತವಾಗದೇ ಇರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಪ್ರಸ್ತಾವನೆಯು ಪೂರಕವಾಗಿರುವುದರಿಂದ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಲು ನಿರ್ಧರಿಸಿ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಿಲ್ಲಕೆಂಪನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:48/4ರ ಒಟ್ಟು 02ಎಕರೆ ವಿಸ್ತೀರ್ಣದ ಜಮೀನಿನ ಪೈಕಿ ವಸತಿ ವಲಯದಲ್ಲಿ ಬರುವ 0ಎ–25ಗು, ಜಮೀನನ್ನು ಹೊರತುಪಡಿಸಿ, ಉಳಿಕೆ 01ಎ–15ಗು ಜಮಿನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:70/2ರ 01ಎ–30ಗು ಮತ್ತು ಸರ್ವೆ ಸಂಖ್ಯೆ:70/3 (ಹಳೆ ಸರ್ವೆ ಸಂಖ್ಯೆ:70/1) ರಲ್ಲಿ 01ಎ–30ಗು ಒಟ್ಟು 03ಎ–20ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇ.100ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಕುರಿತು ಮೆ॥ ಎಲ್.ಟಿ.ಜಿ ಇನ್‌ಫ್ರಾಸ್ಟ್ರಕ್ಚರ್ ಲಿ., ರವರು ಸಲ್ಲಿಸಿರುವ ಮನವಿ ಕುರಿತು.**

*****

ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ದಿನಾಂಕ:10.03.2021ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 70/2ರ 01ಎ–30ಗು ಮತ್ತು ಸರ್ವೆ ಸಂಖ್ಯೆ:70/3 (ಹಳೆ ಸರ್ವೆ ಸಂಖ್ಯೆ:70/1) ರಲ್ಲಿ 01ಎ–30ಗು ಒಟ್ಟು 03ಎ–20ಗು ವಿಸ್ತೀರ್ಣದ ಜಮೀನಿಗೆ ಅನುಮೋದನೆ ನೀಡಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ವಿನ್ಯಾಸವನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಹಾಗೂ ಅಭಿವೃದ್ಧಿಪಡಿಸಿರುವ ಕಾಮಗಾರಿಗಳ ಕುರಿತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಪಡೆದಿರುವ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರಗಳನ್ನು ಲಗತ್ತಿಸಿ, ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇ. 100ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 70/2ರ 01ಎ–30ಗು ಮತ್ತು ಸರ್ವೆ ಸಂಖ್ಯೆ:70/3 (ಹಳೆ ಸರ್ವೆ ಸಂಖ್ಯೆ:70/1) ರಲ್ಲಿ 01ಎ–30ಗು ಒಟ್ಟು 03ಎ–20ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿ ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ:04.11.2019ರಂದು ಅರ್ಜಿ ಸಲ್ಲಿಸಿದ್ದ ಹಿನ್ನಲೆಯಲ್ಲಿ ವಿಷಯವನ್ನು ದಿನಾಂಕ:20.01.2020ರಂದು ಜರುಗಿದ ಪ್ರಾಧಿಕಾರದ 64ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:IX(4)ರಲ್ಲಿ ಮಂಡಿಸಲಾಗಿದ್ದು, ಸಭೆಯ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ)ರಂತೆ ಪ್ರಾಧಿಕಾರದಿಂದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:25.02.2020ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಪ್ರಸ್ತಾಪಿತ ವಿನ್ಯಾಸಕ್ಕೆ ಸಂಬಂಧಿಸಿದಂತೆ ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಾಗಿ ಸಕ್ಷಮ ಪ್ರಾಧಿಕಾರಗಳಿಂದ ದೃಢೀಕರಣ ಪತ್ರಗಳನ್ನು ಪಡೆದು ಸಲ್ಲಿಸಿದ್ದು ಹಾಗೂ ವಿನ್ಯಾಸದಲ್ಲಿ ಅಭಿವೃದ್ಧಿಪಡಿಸಿರುವ ಕಾಮಗಾರಿಗಳ ಛಾಯಾ ಚಿತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಪ್ರಸ್ತಾವನೆ ಸಂಬಂಧ ಪ್ರಸ್ತಾಪಿತ ವಿನ್ಯಾಸವನ್ನು ಸ್ಥಳ ಪರಿಶೀಲಿಸಿ ಕ್ರಮವಹಿಸಬೇಕಾಗಿರುತ್ತದೆ. ಆದರೆ ಸದರಿ ವಿಷಯವನ್ನು ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ ರವರು ಪ್ರಾಧಿಕಾರದ ಸಭೆಯಲ್ಲಿ ಮಂಡಿಸುವಂತೆ ಸೂಚಿಸಿರುತ್ತಾರೆ. ಹಾಗಾಗಿ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರು ಅನುಮೋದಿತ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿ, ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ/ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸಲ್ಲಿಸಿರುತ್ತಾರೆ ಎಂದು ಸದಸ್ಯ-ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು, ಈ ಕುರಿತು ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ ರವರು ಪ್ರಸ್ತುತ ವಿನ್ಯಾಸದಲ್ಲಿ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ವಿನ್ಯಾಸವನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ಖಚಿತಪಡಿಸಿಕೊಂಡು ನಿಯಮಾನುಸಾರ ಕ್ರಮವಹಿಸಬಹುದೆಂದು ಸಭೆಗೆ ವಿವರಿಸಿದರು. ಅದರಂತೆ ವಿಷಯವನ್ನು ಸಭೆಯಲ್ಲಿ ಚರ್ಚಿಸಿ ವಿನ್ಯಾಸದ ಸ್ಥಳ ಪರಿಶೀಲನೆ ಮಾಡಿ ವಿನ್ಯಾಸವನ್ನು ಪೂರ್ಣ ಅಭಿವೃದ್ಧಿಪಡಿಸಿರುವ ಬಗ್ಗೆ ಖಚಿತಪಡಿಸಿಕೊಂಡು ನಿಯಮಾನುಸಾರ ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನಗಳಿಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಸ್ಥಳೀಯ ಸಂಸ್ಥೆಗೆ ಮತ್ತು ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 2015 ಕಲಂ 17(2-ಬಿ) ರಂತೆ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:67/1ರ 01ಎ-08ಗು, 67/2ರ 01ಎ-32ಗು, 67/3ರ 02ಎ-16ಗು, 68/1ರ 02ಎ-07ಗು, 68/2ರ 02ಎ-06ಗು ಮತ್ತು ಸರ್ವೆ ಸಂಖ್ಯೆ:69ರ 04ಎ-24ಗು ಒಟ್ಟು 14ಎ-13ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇ.100ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಕುರಿತು ಮೆ॥ ಎಲ್.ಟಿ.ಜಿ ಇನ್‌ಫ್ರಾಸ್ಟ್ರಕ್ಚರ್ ಲಿ., ರವರು ಸಲ್ಲಿಸಿರುವ ಮನವಿ ಕುರಿತು.**

*****

ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ದಿನಾಂಕ:10.03.2021ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:67/1ರ 01ಎ-08ಗು, 67/2ರ 01ಎ-32ಗು, 67/3ರ 02ಎ-16ಗು, 68/1ರ 02ಎ-07ಗು, 68/2ರ 02ಎ-06ಗು ಮತ್ತು ಸರ್ವೆ ಸಂಖ್ಯೆ:69ರ 04ಎ-24ಗು ಒಟ್ಟು 14ಎ-13ಗು ವಿಸ್ತೀರ್ಣದ ಜಮೀನಿಗೆ ಅನುಮೋದನೆ ನೀಡಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ವಿನ್ಯಾಸವನ್ನು ಅಭಿವೃದ್ಧಿಪಡಿಸಲಾಗಿದೆ ಎಂದು ಹಾಗೂ ಅಭಿವೃದ್ಧಿಪಡಿಸಿರುವ ಕಾಮಗಾರಿಗಳ ಕುರಿತು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಪಡೆದಿರುವ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರಗಳನ್ನು ಲಗತ್ತಿಸಿ, ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ಶೇ. 100ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:67/1ರ 01ಎ-08ಗು, 67/2ರ 01ಎ-32ಗು, 67/3ರ 02ಎ-16ಗು, 68/1ರ 02ಎ-07ಗು, 68/2ರ 02ಎ-06ಗು

ಮತ್ತು ಸರ್ವೆ ಸಂಖ್ಯೆ:69ರ 04ಎ–24ಗು ಒಟ್ಟು 14ಎ–13ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿ ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ:22.02.2019ರಂದು ಅರ್ಜಿ ಸಲ್ಲಿಸಿದ್ದ ಹಿನ್ನಲೆಯಲ್ಲಿ ವಿಷಯವನ್ನು ದಿನಾಂಕ:08.07.2019ರಂದು ಜರುಗಿದ ಪ್ರಾಧಿಕಾರದ 63ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:19ರಲ್ಲಿ ಮಂಡಿಸಲಾಗಿದ್ದು, ಸಭೆಯ ನಿರ್ಣಯದನ್ವಯ ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ (For demarcation and development purposes) ಕೆಟಿಸಿಪಿ(ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ)ರಂತೆ ಪ್ರಾಧಿಕಾರದಿಂದ ಕೆಲವು ನಿಬಂಧನೆಗಳಿಗೊಳಪಡಿಸಿ, ದಿನಾಂಕ:02.08.2019ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಪ್ರಸ್ತಾಪಿತ ವಿನ್ಯಾಸಕ್ಕೆ ಸಂಬಂಧಿಸಿದಂತೆ ನಿವೇಶನಗಳನ್ನು ಬಿಡುಗಡೆಗೊಳಿಸುವ ಕುರಿತು ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಾಗಿ ಸಕ್ಷಮ ಪ್ರಾಧಿಕಾರಗಳಿಂದ ದೃಢೀಕರಣ ಪತ್ರಗಳನ್ನು ಪಡೆದು ಸಲ್ಲಿಸಿದ್ದು, ಹಾಗೂ ವಿನ್ಯಾಸದಲ್ಲಿ ಅಭಿವೃದ್ಧಿಪಡಿಸಿರುವ ಕಾಮಗಾರಿಗಳ ಛಾಯಾ ಚಿತ್ರವನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಪ್ರಸ್ತಾವನೆ ಸಂಬಂಧ ಪ್ರಸ್ತಾಪಿತ ವಿನ್ಯಾಸವನ್ನು ಸ್ಥಳ ಪರಿಶೀಲಿಸಿ ಕ್ರಮವಹಿಸಬೇಕಾಗಿರುತ್ತದೆ. ಆದರೆ ಸದರಿ ವಿಷಯವನ್ನು ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ ರವರು ಪ್ರಾಧಿಕಾರದ ಸಭೆಯಲ್ಲಿ ಮಂಡಿಸುವಂತೆ ಸೂಚಿಸಿರುತ್ತಾರೆ. ಹಾಗಾಗಿ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರು ಅನುಮೋದಿತ ವಿನ್ಯಾಸ ನಕ್ಷೆಯಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿ, ವಿನ್ಯಾಸದಲ್ಲಿನ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ/ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸಲ್ಲಿಸಿರುತ್ತಾರೆ ಎಂದು ಮಾನ್ಯ ಸದಸ್ಯ–ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು ಈ ಕುರಿತು ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ ರವರು ಪ್ರಸ್ತುತ ವಿನ್ಯಾಸದಲ್ಲಿ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ಸ್ಥಳ ಪರಿಶೀಲಿನೆ ಮಾಡಿ ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಂತೆ ವಿನ್ಯಾಸವನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ಖಚಿತಪಡಿಸಿಕೊಂಡು ನಿಯಮಾನುಸಾರ ಕ್ರಮವಹಿಸಬಹುದೆಂದು ಸಭೆಗೆ ವಿವರಿಸಿದರು. ಅದರಂತೆ ವಿಷಯವನ್ನು ಸಭೆಯಲ್ಲಿ ಚರ್ಚಿಸಿ ವಿನ್ಯಾಸದ ಸ್ಥಳ ಪರಿಶೀಲಿನೆ ಮಾಡಿ ವಿನ್ಯಾಸವನ್ನು ಪೂರ್ಣ ಅಭಿವೃದ್ಧಿಪಡಿಸಿರುವ ಬಗ್ಗೆ ಖಚಿತಪಡಿಸಿಕೊಂಡು ನಿಯಮಾನುಸಾರ ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನಗಳಿಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಸ್ಥಳೀಯ ಸಂಸ್ಥೆಗೆ ಮತ್ತು ವಿನ್ಯಾಸದಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 2015 ಕಲಂ 17(2–ಬಿ) ರಂತೆ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ವಿನ್ಯಾಸದಲ್ಲಿನ ಎಲ್ಲಾ ನಿವೇಶನಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4) **ಪ್ರಾಧಿಕಾರದಲ್ಲಿ ಸಂಗ್ರಹವಾಗಿರುವ ಕೆರೆ ಸಂರಕ್ಷಣಾ ಶುಲ್ಕದಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು.**

*****

ಪ್ರಾಧಿಕಾರದಲ್ಲಿ ಸಂಗ್ರಹವಾಗಿರುವ ಕೆರೆ ಸಂರಕ್ಷಣಾ ಶುಲ್ಕದಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ವಿಷಯದ ಕುರಿತು ದಿನಾಂಕ:06.01.2021 ರಂದು ಜರುಗಿದ ಪ್ರಾಧಿಕಾರದ 67ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:IV(2) ರಲ್ಲಿ ಈ ಕೆಳಕಂಡ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಸಂಬಂಧಪಟ್ಟ ಇಲಾಖೆಯಿಂದ ವಿಸ್ತೃತ ಯೋಜನಾ ವರದಿ

(DPR) ಪಡೆದು ಸದರಿ ಕಾಮಗಾರಿಗಳನ್ನು ಸಂಬಂಧಪಟ್ಟ ಇಲಾಖೆಯ ಮುಖಾಂತರವೇ ಕೈಗೊಳ್ಳಲು ಸರ್ಕಾರದ ಅನುಮೋದನೆ ಪಡೆಯುವ ಸಂಬಂಧ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿರುತ್ತದೆ.

ಕ್ರ.ಸಂ	ಗ್ರಾಮ	ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)
1	ಕೆ.ಗೊಲ್ಲಹಳ್ಳಿ	1.50
2	ಬಿ.ಎಂ.ಕಾವಲ್	2.00
3	ಚಿನ್ನಕುರ್ಚಿ	1.50
4	ಗೋಣಿಪುರ	2.00
5	ತಿಪ್ಪೂರು	1.00
	ಒಟ್ಟು	**8.00**

ಪ್ರಾಧಿಕಾರದ ಸಭೆಯ ತೀರ್ಮಾನದಂತೆ ದಿನಾಂಕ:11.01.2021ರಂದು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ರವರಿಗೆ ಪತ್ರ ಬರೆದು, ಮೇಲ್ಕಂಡ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ವಿಸ್ತೃತ ಯೋಜನಾ ವರದಿಯನ್ನು ತ್ರಿ-ಪ್ರತಿಯಲ್ಲಿ ಸಿದ್ದಪಡಿಸಿ ಕಳುಹಿಸಿಕೊಡಲು ತಿಳಿಸಲಾಗಿರುತ್ತದೆ. ಅದರಂತೆ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ರವರು ಪತ್ರ ಸಂಖ್ಯೆ: ಕಾಅ/ಪಂರಾಇಂವಿ/ಬೆಂನ/AE-1/2020-21/4160, ದಿನಾಂಕ:16.03.2021ರಲ್ಲಿ ಈ ಕೆಳಕಂಡ ಕೆರೆಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ.

ಕ್ರ.ಸಂ	ಗ್ರಾಮ	ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)
1	ಕೆ.ಗೊಲ್ಲಹಳ್ಳಿ	2.55
2	ಕುಬ್ಬರೆಡ್ಡಿ (ಬಿ.ಎಂ.ಕಾವಲ್)	2.10
3	ಚಿನ್ನಕುರ್ಚಿ	1.10
4	ಗೋಣಿಪುರ (ಗುರುಶಾಂತಯ್ಯನ ಕೆರೆ)	1.90
5	ತಿಪ್ಪೂರು (ಚಿನ್ನಜ್ಜಿ)	2.10
	ಒಟ್ಟು	**9.75**

ಆದರೆ, ದಿನಾಂಕ:06.01.2021 ರಂದು ಜರುಗಿದ ಪ್ರಾಧಿಕಾರದ 67ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:IV(2) ರ ವಿಷಯದಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ರೂ.8.0 ಕೋಟಿ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ತೀರ್ಮಾನಿಸಿದ್ದು, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ರವರು ಸಲ್ಲಿಸಿರುವ ವಿಸ್ತೃತ ಯೋಜನಾ ವರದಿ (DPR) ದಂತೆ ಒಟ್ಟು ಕಾಮಗಾರಿಗಳ ಅಂದಾಜು ಮೊತ್ತ ರೂ.9.75 ಕೋಟಿ ಆಗಿರುತ್ತದೆ. ಹಾಗಾಗಿ, ಸದರಿ ಕೆರೆ ಅಭಿವೃದ್ಧಿ ಕಾಮಗಾರಿಗಳ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ

ವಿಷಯದ ಕುರಿತು ಸಭೆಯಲ್ಲಿ ಕುಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತುತ ಪ್ರಾಧಿಕಾರದಲ್ಲಿ ಲಭ್ಯವಿರುವ ಕೆರೆ ಸಂರಕ್ಷಣಾ ಶುಲ್ಕ ದಲ್ಲಿ ರೂ.8.0 ಕೋಟಿ ವೆಚ್ಚದಲ್ಲಿ, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ 05 ಕೆರೆಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ದಿ:06.01.2021ರಂದು ನಡೆದ ಪ್ರಾಧಿಕಾರದ 67ನೇ ಸಾಮಾನ್ಯ ಸಭೆಯ ನಿರ್ಣಯದಂತೆ ಅಂದಾಜು ಪಟ್ಟಿಯನ್ನು ಸಲ್ಲಿಸಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರಿಗೆ ತಿಳಿಸಲಾಗಿತ್ತು. ಅದರಂತೆ ಸದರಿಯವರು ಒಟ್ಟು ರೂ. 9.75ಕೋಟಿ ವೆಚ್ಚಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಆದರೆ, ಕೇವಲ ರೂ.8.0ಕೋಟಿ ವೆಚ್ಚದ ಮಿತಿಯಲ್ಲಿ ಅಂದಾಜು ಪಟ್ಟಿಯನ್ನು ಅನುಮೋದನೆಗಾಗಿ

ಸರ್ಕಾರಕ್ಕೆ ಸಲ್ಲಿಸಬಹುದಾಗಿರುತ್ತದೆ ಎಂದು ಸದಸ್ಯ ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಈ ಕುರಿತು ಮಾನ್ಯ ಅಧ್ಯಕ್ಷರು ಮಾತನಾಡಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರು ಸಲ್ಲಿಸಿರುವ ಅಂದಾಜು ಪಟ್ಟಿಗಳ ಪೈಕಿ ಕ್ರಮ.ಸಂ(04)ರ ಗೋಣಿಪುರ ಕೆರೆ (ಗುರುಶಾಂತಯ್ಯನ ಕೆರೆ) ಅಭಿವೃದ್ಧಿ ಕಾಮಗಾರಿಯನ್ನು ಹೊರತುಪಡಿಸಿ ಉಳಿದ 04 ಕೆರೆಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಬಹುದೆಂದು ಸಭೆಗೆ ತಿಳಿಸಿದರು.

ಅದರಂತೆ, ಈ ಕೆಳಕಂಡ ನಾಲ್ಕು (04) ಕೆರೆ ಅಭಿವೃದ್ಧಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಕ್ರ.ಸಂ	ಗ್ರಾಮ	ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)
1	ಕೆ.ಗೊಲ್ಲಹಳ್ಳಿ	2.55
2	ಕುಬ್ಬರೆಡ್ಡಿ (ಬಿ.ಎಂ.ಕಾವಲ್)	2.10
3	ಚಿನ್ನಕುರ್ಚಿ	1.10
4	ತಿಪ್ಪೂರು (ಚಿನ್ನಜ್ಜಿ)	2.10
	ಒಟ್ಟು	7.85

ಮುಂದುವರೆದು, ಸದರಿ ಕಾಮಗಾರಿಗಳನ್ನು ಸಂಬಂಧಪಟ್ಟ ಇಲಾಖೆಯ ಮುಖಾಂತರವೇ ಕೈಗೊಳ್ಳಲು ಸರ್ಕಾರದ ಅನುಮೋದನೆ ಪಡೆಯುವ ಸಂಬಂಧ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಸಲು ಸಭೆಯಲ್ಲಿ ಸರ್ವಾನುಮತದಿಮದ ತೀರ್ಮಾನಿಸಲಾಯಿತು.

5) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 8/1ರ 0ಎ–21ಗು, 8/2ರ 0ಎ–13ಗು, 8/3ರ 0ಎ–19½ಗು, 8/5ರ 0ಎ–07½ಗು, 8/7ರ 0ಎ–23½ಗು, 8/8ರ 0ಎ–23½ಗು, 8/10ರ 01ಎ–22ಗು, 8/11ರ 0ಎ–18ಗು, 8/12ರ 0ಎ–25ಗು, 8/13ರ 0ಎ–12½ಗು, 8/14ರ 0ಎ–12½ಗು, 8/15ರ 0ಎ–16½ಗು, 8/16ರ 0ಎ–16½ಗು, 8/17ರ 01ಎ–18, 8/18ರ 0ಎ–07ಗು, 11/1ರ 0ಎ–27ಗು, 11/2ರ 0ಎ–28ಗು, 12/1ರ 0ಎ–24ಗು ಮತ್ತು ಸರ್ವೆ ಸಂಖ್ಯೆ:12/2ರ 0ಎ–11ಗು ಒಟ್ಟು 10ಎ–26ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಶ್ರೀಮತಿ ರುಕ್ಮಿಣಿ ನಾರಾಯಣ ಇವರು ಸಲ್ಲಿಸಿರುವ ಮನವಿ ಕುರಿತು.**

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 8/1ರ 0ಎ–21ಗು, 8/2ರ 0ಎ–13ಗು, 8/3ರ 0ಎ–19½ಗು, 8/5ರ 0ಎ–07½ಗು, 8/7ರ 0ಎ–23½ಗು, 8/8ರ 0ಎ–23½ಗು, 8/10ರ 01ಎ–22ಗು, 8/11ರ 0ಎ–18ಗು, 8/12ರ 0ಎ–25ಗು, 8/13ರ 0ಎ–12½ಗು, 8/14ರ 0ಎ–12½ಗು, 8/15ರ 0ಎ–16½ಗು, 8/16ರ 0ಎ–16½ಗು, 8/17ರ 01ಎ–18, 8/18ರ 0ಎ–07ಗು, 11/1ರ 0ಎ–27ಗು, 11/2ರ 0ಎ–28ಗು, 12/1ರ 0ಎ–24ಗು ಮತ್ತು ಸರ್ವೆ ಸಂಖ್ಯೆ:12/2ರ 0ಎ–11ಗು ಒಟ್ಟು 10ಎ–26ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ದಿನಾಂಕ: 01.03.2021 ರಂದು ಮನವಿ ಸಲ್ಲಿಸಲಾಗಿದೆ.

ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಯಾಗಿರುವ ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ:ನಅಇ 438 ಮೈಅಪ್ರಾ 2016, ಬೆಂಗಳೂರು, ದಿನಾಂಕ:09.01.2018ರಂತೆ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ:8/1ರ 0ಎ–21ಗು, 8/2ರ 0ಎ–13ಗು, 8/3ರ 0ಎ–19½ಗು, 8/4ರ 0ಎ–18½ಗು, 8/5ರ

0ಎ–07½ಗು, 8/6ರ 0ಎ–08½ಗು, 8/7ರ 0ಎ–23½ಗು, 8/8ರ 0ಎ–23½ಗು, 8/9ರ 0ಎ–24ಗು 8/10ರ 01ಎ–22ಗು, 8/11ರ 0ಎ–18ಗು, 8/12ರ 0ಎ–25ಗು, 8/13ರ 0ಎ–12½ಗು, 8/14ರ 0ಎ–12½ಗು, 8/15ರ 0ಎ–16½ಗು, 8/16ರ 0ಎ–16½ಗು, 8/17ರ 01ಎ–18, 8/18ರ 0ಎ–07ಗು, 11/1ರ 0ಎ–27ಗು, 11/2ರ 0ಎ–28ಗು, 12/1ರ 0ಎ–24ಗು ಮತ್ತು ಸರ್ವೆ ಸಂಖ್ಯೆ:12/2ರ 0ಎ–11ಗು ಒಟ್ಟು 11ಎ–37ಗು ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಆದೇಶ ಹೊರಡಿಸಲಾಗಿದೆ. ಅದರಂತೆ ಪ್ರಾಧಿಕಾರದಿಂದ ಆದೇಶ ಸಂಖ್ಯೆ: ಬಿಎಂಐಸಿಎಪಿಎ/ನಯೋ–1/103/ಭೂಉಬ/2013–14, ದಿನಾಂಕ:21.02.2018ರಂತೆ ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿರುತ್ತದೆ.

ಪ್ರಸ್ತಾಪಿತ ಜಮೀನನ್ನು ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರ ಸಂಖ್ಯೆ:LAND10016458, ದಿನಾಂಕ:17.06.2019ರಲ್ಲಿ 8/12ರ 0ಎ–25ಗು, ಸಂಖ್ಯೆ:LAND10013972, ದಿನಾಂಕ:17.06.2019ರಲ್ಲಿ ಸರ್ವೆ ಸಂಖ್ಯೆ:8/13ರ 0ಎ–12½ಗು, ಸಂಖ್ಯೆ:LAND10013973, ದಿನಾಂಕ:17.06.2019ರಲ್ಲಿ ಸರ್ವೆ ಸಂಖ್ಯೆ:8/14ರ 0ಎ–12½ಗು, ಅರ್ಜಿ ಸಂಖ್ಯೆ:114111, ದಿನಾಂಕ:01.01.2020ರಲ್ಲಿ ಸರ್ವೆ ಸಂಖ್ಯೆ:8/16ರ 0ಎ–0ಎ–14¼ಗು, ಸಂಖ್ಯೆ:LAND10013975, ದಿನಾಂಕ:17.06.2019ರಲ್ಲಿ ಸರ್ವೆ ಸಂಖ್ಯೆ:8/1ರ 0ಎ–21ಗು, 11/1ರ 0ಎ–27ಗು, 12/1ರ 0ಎ–24ಗು, ಅರ್ಜಿ ಸಂಖ್ಯೆ:191362, ದಿನಾಂಕ:18.11.2020ರಲ್ಲಿ ಸರ್ವೆ ಸಂಖ್ಯೆ:8/17ರ 01ಎ–01¾ಗು, ಸಂಖ್ಯೆ:LAND10013975, ದಿನಾಂಕ:17.06.2019ರಲ್ಲಿ ಸರ್ವೆ ಸಂಖ್ಯೆ:8/1ರಲ್ಲಿ 0ಎ–21ಗು, 11/1ರಲ್ಲಿ 0ಎ–27ಗು, 12/1ರಲ್ಲಿ 0ಎ–24ಗು, ಸಂಖ್ಯೆ:LAND10013974, ದಿನಾಂಕ:17.06.2019ರಲ್ಲಿ ಸರ್ವೆ ಸಂಖ್ಯೆ:8/5ರ 0ಎ–07½ಗು, 8/3ರ 0ಎ–19½ಗು, ಸಂಖ್ಯೆ:LNDC10002394, ದಿನಾಂಕ:17.06.2019 ರಲ್ಲಿ ಸರ್ವೆ ಸಂಖ್ಯೆ:8/2ರ 0ಎ–13ಗು, 8/11ರ 0ಎ–18ಗು, 8/18ರ 0ಎ–07ಗು, 11/2ರ 0ಎ–28ಗು, 12/2ರ 0ಎ–11ಗು, ಸಂಖ್ಯೆ:LAND 10013969, ದಿನಾಂಕ:17.06.2019 ರಲ್ಲಿ ಸರ್ವೆ ಸಂಖ್ಯೆ:8/7ರ 0ಎ–23½ಗು, LAND 10013976, ದಿನಾಂಕ:17.06.2019ರಲ್ಲಿ ಸರ್ವೆ ಸಂಖ್ಯೆ:8/8ರ 0ಎ–23½ಗು, LAND 10016457, ದಿನಾಂಕ:17.06.2019 ರಲ್ಲಿ ಸರ್ವೆ ಸಂಖ್ಯೆ:8/10ರ 01ಎ–22ಗು ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಅಧಿಕೃತ ಜ್ಞಾಪನ ಹೊರಡಿಸಿರುತ್ತಾರೆ.

ಪ್ರಸ್ತಾವನೆ ಸಂಬಂಧ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ ನಂತರ ಪ್ರಸ್ತಾಪಿತ ವಿನ್ಯಾಸವನ್ನು ಸ್ಥಳ ಪರಿಶೀಲಿಸಿ ಕ್ರಮವಹಿಸಬೇಕಾಗಿರುತ್ತದೆ. ಆದರೆ, ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ ರವರು ಪ್ರಸ್ತಾಪಿತ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ಪ್ರಸ್ತಾವನೆಯನ್ನು ಹೆಚ್ಚುವರಿ ವಿಷಯವನ್ನಾಗಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸುವಂತೆ ಸೂಚಿಸಿರುತ್ತಾರೆ. ಅದರಂತೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಜಮೀನುಗಳನ್ನು ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ 438 ಮೈಅಪ್ರಾ 2016, ಬೆಂಗಳೂರು, ದಿನಾಂಕ:09.01.2018ರಂತೆ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ:8/1ರ 0ಎ–21ಗು, 8/2ರ 0ಎ–13ಗು, 8/3ರ 0ಎ–19½ಗು, 8/4ರ 0ಎ–18½ಗು, 8/5ರ 0ಎ–07½ಗು, 8/6ರ 0ಎ–08½ಗು, 8/7ರ 0ಎ–23½ಗು, 8/8ರ 0ಎ–23½ಗು, 8/9ರ 0ಎ–24ಗು 8/10ರ 01ಎ–22ಗು, 8/11ರ 0ಎ–18ಗು, 8/12ರ 0ಎ–25ಗು, 8/13ರ 0ಎ–12½ಗು, 8/14ರ 0ಎ–12½ಗು, 8/15ರ 0ಎ–16½ಗು, 8/16ರ 0ಎ–16½ಗು, 8/17ರ 01ಎ–18, 8/18ರ

0ಎ–07ಗು, 11/1ರ 0ಎ–27ಗು, 11/2ರ 0ಎ–28ಗು, 12/1ರ 0ಎ–24ಗು ಮತ್ತು ಸರ್ವೆ ಸಂಖ್ಯೆ:12/2ರ 0ಎ–11ಗು ಒಟ್ಟು 11ಎ–37ಗು ಜಮೀನಿಗೆ ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಆದೇಶ ಹೊರಡಿಸಲಾಗಿದೆ. ಹಾಗಾಗಿ ಒಟ್ಟು 11ಎ–37ಗು ಜಮೀನಿಗೆ ವಸತಿ ವಿನ್ಯಾಸಕ್ಕೆ ಪ್ರಸ್ತಾವನೆ ಸಲ್ಲಿಸುವುದು ಸೂಕ್ತವೆಂದು ಸದಸ್ಯ–ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು, ಈ ಕುರಿತು ಮಾನ್ಯ ಅಧ್ಯಕ್ಷರು, ಮಾತನಾಡಿ ಅರ್ಜಿದಾರರು ಪ್ರಸ್ತಾವನೆಯಲ್ಲಿ ಒಟ್ಟು 11ಎ–37ಗು ಪೈಕಿ 01ಎ–11ಗು ಜಮೀನನ್ನು ಹೊರತುಪಡಿಸಿ 10ಎ–26ಗು ಜಮೀನಿಗೆ ಮಾತ್ರ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವುದನ್ನು ಮತ್ತು ಉಳಿಕೆ 01ಎ–11ಗು ವಿಸ್ತೀರ್ಣದ ಜಮೀನನ್ನು ಮೂಲ ಮಾಲೀಕರು ಪ್ರಸ್ತಾಪಿತ ಅರ್ಜಿದಾರರಿಗೆ ನಿಡದೇ ಇರುವುದರಿಂದ, ಸರ್ವೆ ಸಂಖ್ಯೆ:8/4ರ 0ಎ–18½ಗು, ಸರ್ವೆ ಸಂಖ್ಯೆ:8/9ರ 0ಎ–24ಗು ಪ್ರತ್ಯೇಕವಾಗಿ ರಸ್ತೆ ಸಂಪರ್ಕ ಇರುವುದರಿಂದ ಹಾಗೂ ಸರ್ವೆ ಸಂಖ್ಯೆ:8/6ರ 0ಎ–08½ಗು ಜಮೀನಿಗೆ ಪ್ರಸ್ತಾವಿತ ವಿನ್ಯಾಸದಲ್ಲಿ ರಸ್ತೆ ಸಂಪರ್ಕ ಕಲ್ಪಿಸುವುದಾಗಿ ಅರ್ಜಿದಾರರು ಅಫಿಡವಿಟ್ ಸಲ್ಲಿಸಿರುವುದನ್ನು ಸಭೆಯಲ್ಲಿ ವಿವರಿಸಿದರು. ಈ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿ, ಸರ್ವೆ ಸಂಖ್ಯೆ:8/4ರ 0ಎ–18½ಗು, ಸರ್ವೆ ಸಂಖ್ಯೆ:0ಎ–18½ಗು, ಸರ್ವೆ ಸಂಖ್ಯೆ:8/9ರ 0ಎ–24ಗು ಜಮೀನುಗಳಿಗೆ ಪ್ರತ್ಯೇಕವಾಗಿ ರಸ್ತೆ ಸಂಪರ್ಕ ಇರುವುದರಿಂದ ಹಾಗೂ ಸರ್ವೆ ಸಂಖ್ಯೆ:8/6ರ 0ಎ–08½ಗು ಜಮೀನಿಗೆ ಪ್ರಸ್ತಾವಿತ ವಿನ್ಯಾಸದಲ್ಲಿ ರಸ್ತೆ ಸಂಪರ್ಕ ಕಲ್ಪಿಸುವುದಾಗಿ ತಿಳಿಸಿರುವುದರಿಂದ ಉಳಿದ ಜಮೀನಿನ ಮಾಲೀಕರು ಒಂದುವೇಳೆ ಒಟ್ಟಾರೆಯಾಗಿ ವಿನ್ಯಾಸ ಅನುಮೋದನೆ ಪಡೆಯಲು ಒಪ್ಪಿದ್ದಲ್ಲಿ ಮಾರ್ಪಡಿತ ವಿನ್ಯಾಸಕ್ಕೆ ಅನುಮೋದನೆ ಪಡೆಯುವ ಷರತ್ತಿಗೆ ಒಳಪಟ್ಟು ಪ್ರಸ್ತಾಪಿತ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 8/1ರ 0ಎ–21ಗು, 8/2ರ 0ಎ–13ಗು, 8/3ರ 0ಎ–19½ಗು, 8/5ರ 0ಎ–07½ಗು, 8/7ರ 0ಎ–23½ಗು, 8/8ರ 0ಎ–23½ಗು, 8/10ರ 01ಎ–22ಗು, 8/11ರ 0ಎ–18ಗು, 8/12ರ 0ಎ–25ಗು, 8/13ರ 0ಎ–12½ಗು, 8/14ರ 0ಎ–12½ಗು, 8/15ರ 0ಎ–16½ಗು, 8/16ರ 0ಎ–16½ಗು, 8/17ರ 01ಎ–18, 8/18ರ 0ಎ–07ಗು, 11/1ರ 0ಎ–27ಗು, 11/2ರ 0ಎ–28ಗು, 12/1ರ 0ಎ–24ಗು ಮತ್ತು ಸರ್ವೆ ಸಂಖ್ಯೆ:12/2ರ 0ಎ–11ಗು ಒಟ್ಟು 10ಎ–26ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ಅಗತ್ಯ ಮಾಹಿತಿ/ ದಾಖಲೆಗಳನ್ನು ಪಡೆದು ಸ್ಥಳ ಪರಿಶೀಲನೆ ಮಾಡಿ ನಿಯಮಾನುಸಾರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

6) **ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಗೊರವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:146/1ಬಿರ 0ಎ–18ಗು ಮತ್ತು ಸರ್ವೆ ಸಂಖ್ಯೆ:146/1ಸಿರ 0ಎ–06ಗು ಒಟ್ಟು 0ಎ–24ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಪೆಟ್ರೋಲ್ ಬಂಕ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಎಂ.ಕೆ.ಅಶೋಕ್ ಬಿನ್ ಲೇಟ್ ಎಂ.ಬಿ.ಕೆಂಪಬೋರಯ್ಯ ಇವರು ಸಲ್ಲಿಸಿರುವ ಮನವಿ ಕುರಿತು.**

******

ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಗೊರವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:146/1ಬಿರ 0ಎ–18ಗು ಮತ್ತು ಸರ್ವೆ ಸಂಖ್ಯೆ:146/1ಸಿರ 0ಎ–06ಗು ಒಟ್ಟು 0ಎ–24ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಪೆಟ್ರೋಲ್ ಬಂಕ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿದಾರರಾದ ಶ್ರೀ ಎಂ.ಕೆ.ಅಶೋಕ್ ಬಿನ್ ಲೇಟ್ ಎಂ.ಬಿ.ಕೆಂಪಬೋರಯ್ಯ ರವರು ಅರ್ಜಿ ಸಲ್ಲಿಸಿರುತ್ತಾರೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ ನಕ್ಷೆಯಲ್ಲಿ ಪ್ರಸ್ತಾಪಿತ ಜಮೀನನ್ನು ಭಾಗಶಃ ವ್ಯವಸಾಯ ಹಾಗೂ ಭಾಗಶಃ ಸಾರಿಗೆ ಮತ್ತು ಸಂಪರ್ಕ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ: ವಿಭೂಸ್ವಾ–2/ ಬಿಎಂಐಸಿಪಿ/ಸಿಆರ್:/19/2020–21, ದಿನಾಂಕ:11.09.2020ರಲ್ಲಿ **"ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಗೊರವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:146/1ಬಿರ 0ಎ–18ಗು ಮತ್ತು ಸರ್ವೆ ಸಂಖ್ಯೆ:146/1ಸಿರ 0ಎ–06ಗು ಒಟ್ಟು 0ಎ–24ಗು ವಿಸ್ತೀರ್ಣದ ಜಮೀನುಗಳಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ"** ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ, ವಲಯ ಕಛೇರಿ, ಮೈಸೂರು ರವರ ಪತ್ರ ಸಂಖ್ಯೆ: ಭೂಸ್ವಾ(7) ಸಿ.ಆರ್/ / 2020–21/736, ದಿನಾಂಕ:17.10.2020ರಲ್ಲಿ "**ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಗೊರವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:146/1ಬಿರ 0ಎ–18ಗು ಮತ್ತು ಸರ್ವೆ ಸಂಖ್ಯೆ:146/1ಸಿರ 0ಎ–06ಗು ಒಟ್ಟು 0ಎ–24ಗು ವಿಸ್ತೀರ್ಣದ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಇದುವರೆವಿಗೂ ಯಾವುದೇ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ**" ಎಂದು ತಿಳಿಸಿರುತ್ತಾರೆ.

ದಿನಾಂಕ:17.02.2021ರಂದು ಪ್ರಾಧಿಕಾರದಿಂದ ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲಿಸಲಾಗಿ, ಪ್ರಶ್ನಿತ ಜಮೀನಿನ ಉತ್ತರಕ್ಕೆ ಹಾಲಿ 60ಮೀ ಅಗಲದ ರಾಷ್ಟ್ರೀಯ ಹೆದ್ದಾರಿ–275 ರಿಂದ ಸಂಪರ್ಕವಿದ್ದು, ಜಮೀನಿಗೆ ಹೊಂದಿಕೊಂಡಂತೆ ವಾಣಿಜ್ಯ (ಹೋಟೆಲ್) ಬೆಳವಣಿಗೆ ಇರುವುದನ್ನು ಗಮನಿಸಲಾಗಿದೆ.

ಪ್ರಸ್ತಾವನೆಯನ್ನು ಸರ್ಕಾರವು ದಿನಾಂಕ:12.10.2012ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳೊಂದಿಗೆ ಪರಿಶೀಲಿಸಲಾಗಿ, ಪ್ರಸ್ತಾವನೆಯು ಮಾರ್ಗಸೂಚಿಗಳಲ್ಲಿನ ಅವಕಾಶ A.4(e) ಮತ್ತು B.(12)ರ ಅಂಶಗಳಿಗೆ ತಾಳೆ ಹೊಂದುತ್ತಿರುವುದನ್ನು ಗಮನಿಸಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ಕಲಂ 14(ಎ)ರನ್ವಯ ಭೂ ಉಪಯೋಗ ಬದಲಾವಣೆ ಕೋರಿಕೆಯನ್ನು ದಿನಾಂಕ:25.02.2021ರಂದು "**ಪ್ರಜಾವಾಣಿ**" **ಮತ್ತು** "**ದಿ ಹಿಂದೂ**" ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಿ, ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಆದರೆ ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ನಿಗಧಿತ ಅವಧಿಯಲ್ಲಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಹಾಗಾಗಿ, ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಪ್ರಸ್ತಾಪಿತ ಜಮೀನುಗಳಿಗೆ ಹೊಂದಿಕೊಂಡಿರುವ ರಾಷ್ಟ್ರೀಯ ಹೆದ್ದಾರಿಗೆ ನಿಯಮಾನುಸಾರ ರಸ್ತೆ ಮಾರ್ಜಿನ್ ಹಾಗೂ ಕಟ್ಟಡ ರೇಖೆ ಕಾಯ್ದಿರಿಸುವ ಷರತ್ತಿಗೊಳಪಟ್ಟು ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಗೊರವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:146/1ಬಿರ 0ಎ–18ಗು ಮತ್ತು ಸರ್ವೆ ಸಂಖ್ಯೆ:146/1ಸಿರ 0ಎ–06ಗು ಒಟ್ಟು 0ಎ–24ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಪೆಟ್ರೋಲ್ ಬಂಕ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಪರಿಗಣಿಸಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಗೊರವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:146/1ಬಿರ 0ಎ–18ಗು ಮತ್ತು ಸರ್ವೆ ಸಂಖ್ಯೆ:146/1ಸಿರ 0ಎ–06ಗು ಒಟ್ಟು 0ಎ–24ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ಭಾಗಶಃ ವ್ಯವಸಾಯ ಹಾಗೂ ಭಾಗಶಃ ಸಾರಿಗೆ ಮತ್ತು ಸಂಪರ್ಕ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಶ್ನಿತ ಜಮೀನಿನ ಉತ್ತರಕ್ಕೆ ಹಾಲಿ 60ಮೀ ಅಗಲದ ರಾಷ್ಟ್ರೀಯ ಹೆದ್ದಾರಿ–275 ರಿಂದ ಸಂಪರ್ಕವಿದ್ದು, ಜಮೀನಿಗೆ ಹೊಂದಿಕೊಂಡಂತೆ ವಾಣಿಜ್ಯ (ಹೋಟೆಲ್) ಬೆಳವಣಿಗೆಗಳು ಬಂದಿರುವುದರಿಂದ, ದಿನಾಂಕ:12.10.2012ರ ಭೂ ಉಪಯೋಗ ಬದಲಾವಣೆಯ ಮಾರ್ಗಸೂಚಿಗಳಲ್ಲಿ ಅವಕಾಶ A.4(e) ಮತ್ತು B.(12)ರಂತೆ ಮಹಾಯೋಜನೆಯ ಪರಿಷ್ಕರಣೆಯ ಸಮಯದಲ್ಲಿ

ಪ್ರಶ್ನಿತ ಜಮೀನನ್ನು ನಗರೀಕರಣ ಎಲ್ಲೆಯೊಳಗೆ ಸೇರಿಸಿಕೊಂಡು ಭೂ ಉಪಯೋಗ ನಿಗಧಿಪಡಿಸಿ ಅಭಿವೃದ್ಧಿಗಳ ವಿಸ್ತರಣೆಗಾಗಿ ಕಾಯ್ದಿರಿಸಬೇಕಾದ ಪ್ರದೇಶದಲ್ಲಿ ಅಳವಡಿಸಿಕೊಳ್ಳಬಹುದಾಗಿರುವುದನ್ನು ಮತ್ತು ಪ್ರಶ್ನಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕೆಐಎಡಿಬಿ, ಕೆಐಎಡಿಬಿ(ಬಿಎಂಐಸಿಪಿ)ರವರು ಮಾಹಿತಿ ನೀಡಿರುವುದನ್ನು ಹಾಗೂ ಪ್ರಸ್ತಾವನೆಗೆ ಸಂಬಂಧಿಸಿದಂತೆ ಯಾವುದೇ ಆಕ್ಷೇಪಣೆ ಸ್ವೀಕೃತಿಯಾಗಿಲ್ಲದೇ ಇರುವುದನ್ನು ಸಭೆಯು ಗಮನಿಸಿತು. ಈ ಹಿನ್ನಲೆಯಲ್ಲಿ, ಅನುಮೋದಿತ ಮಹಾಯೋಜನೆಯಲ್ಲಿ ಭಾಗಶಃ ಸಾರಿಗೆ ಮತ್ತು ಸಂಪರ್ಕ ವಲಯದಲ್ಲಿ ಕಾಯ್ದಿರಿಸಿರುವ ಪ್ರದೇಶವು ರಸ್ತೆ ಮಾರ್ಜಿನ್ ಮತ್ತು ಕಟ್ಟಡ ರೇಖೆಯಲ್ಲಿ ಬರುತ್ತಿರುವುದರಿಂದ, ಪ್ರಸ್ತಾಪಿತ ಜಮೀನುಗಳಿಗೆ ಹೊಂದಿಕೊಂಡಿರುವ ರಾಷ್ಟ್ರೀಯ ಹೆದ್ದಾರಿಗೆ ನಿಯಮಾನುಸಾರ ರಸ್ತೆ ಮಾರ್ಜಿನ್ ಹಾಗೂ ಕಟ್ಟಡ ರೇಖೆ ಕಾಯ್ದಿರಿಸುವ ಷರತ್ತಿಗೊಳಪಟ್ಟು ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಗೊರವನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:146/1ಬಿರ 0ಎ–18ಗು ಮತ್ತು ಸರ್ವೆ ಸಂಖ್ಯೆ:146/1ಸಿರ 0ಎ–06ಗು ಒಟ್ಟು 0ಎ–24ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಪೆಟ್ರೋಲ್ ಬಂಕ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಮುಖೇನ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

7) **ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 188/1ರ 03ಎ–04ಗು, 188/3ರ 03ಎಕರೆ, 189ರ 01ಎ–02ಗು, 286/1ರ 0ಎ–30ಗು, 286/2ರ 01ಎ–28ಗು, 286/3ರ 02ಎ–05ಗು, 290/1ರ 03ಎ–38ಗು, 290/2ರ 0ಎ–32ಗು, 291/1ರ 03ಎ–12ಗು, 291/2ರ 02ಎ–05ಗು (ಭೂಉಪಯೋಗ ಬದಲಾವಣೆಯಾಗದ 01ಗುಂಟೆ 'ಅ' ಖರಾಬು ಹೊರತುಪಡಿಸಿ) ಒಟ್ಟು 21ಎ–36ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಕರ್ನಾಟಕ ಗೃಹ ಮಂಡಳಿ ಮೈಸೂರು ಉಪ ವಿಭಾಗ ಇವರು ಸಲ್ಲಿಸಿರುವ ಮನವಿ ಕುರಿತು.**

******

ವಿಷಯಕ್ಕೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು ಕರ್ನಾಟಕ ಗೃಹ ಮಂಡಳಿ ಮೈಸೂರು ಉಪ ವಿಭಾಗ, ರವರ ಕಛೇರಿ ಪತ್ರ ಸಂಖ್ಯೆ: ಕಗೃಮಂ/ಸ.ಕಾ.ಅ/ಮೈ.ಉ.ವಿ/1200/2020–21, ದಿನಾಂಕ:01.02.2021ರಲ್ಲಿ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 188/1ರ 03ಎ–04ಗು, 188/3ರ 03ಎಕರೆ, 189ರ 01ಎ–02ಗು, 286/1ರ 0ಎ–30ಗು, 286/2ರ 01ಎ–28ಗು, 286/3ರ 02ಎ–05ಗು, 290/1ರ 03ಎ–38ಗು, 290/2ರ 0ಎ–32ಗು, 291/1ರ 03ಎ–12ಗು, 291/2ರ 02ಎ–05ಗು ಒಟ್ಟು 21ಎ–37ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಿರುತ್ತಾರೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆ ನಕ್ಷೆಯಲ್ಲಿ ಕೆಸರೆ ಗ್ರಾಮದ ಸರ್ವೆ ಸಂಖ್ಯೆ:188, 189, 286, 290, 291ರ ಪೂರ್ಣ ಜಮೀನುಗಳನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 375 ಮೈಅಪ್ರಾ 2018, ಬೆಂಗಳೂರು, ದಿನಾಂಕ:31.05.2019ರಲ್ಲಿ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 173ರ 02ಎಕರೆ, 188/1ರ 03ಎ–04ಗು, 188/2ರ 03ಎಕರೆ, 189ರ 01ಎ–02ಗು, 286/1ರ 0ಎ–30ಗು, 286/2ರ 01ಎ–28ಗು, 286/3ರ 02ಎ–05ಗು, 290/1ರ 0ಎ–10ಗು, 290/2ರ 04ಎ–20ಗು, 291/1ರ 03ಎ–30ಗು, 291/2ರ 01ಎ–27ಗು ಒಟ್ಟು 23ಎ–36ಗು ಜಮೀನಿಗೆ ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರದಿಂದ ಅನುಮೋದನೆ ನೀಡಲಾಗಿದ್ದು, ಪ್ರಾಧಿಕಾರದ ಪತ್ರ ಸಂಖ್ಯೆ: ಬಿಎಂಐಸಿಎಪಿಎ/15/ಭೂಉಬ/1299/2010–11/ 636, ದಿನಾಂಕ:29.06.2019ರಲ್ಲಿ ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಮೈಸೂರು ಉಪವಿಭಾಗ ರವರ ಪತ್ರ ದಿನಾಂಕ:12.07.2019ರಲ್ಲಿ ಆರ್.ಟಿ.ಸಿ ಯಂತೆ ಭೂ ಉಪಯೋಗ ಬದಲಾವಣೆ ಆದೇಶದಲ್ಲಿನ ಸರ್ವೆ

ಸಂಖ್ಯೆ:290/1ರ 03ಎ–38ಗು, 290/2ರ 0ಎ–32ಗು, 291/1ರ 03ಎ–12ಗು ಮತ್ತು ಸರ್ವೆ ಸಂಖ್ಯೆ:291/2ರ 02ಎ–05ಗು ಎಂದು ತಿದ್ದುಪಡಿ ಮಾಡಲು ಕೋರಿರುತ್ತಾರೆ. ಅದರಂತೆ, ಸರ್ಕಾರದ ಆದೇಶ ಸಂಖ್ಯೆ:ನಅಇ 375 ಮೈಅಪ್ರಾ 2018, ಬೆಂಗಳೂರು, ದಿನಾಂಕ:12.03.2020ರಲ್ಲಿ ತಿದ್ದುಪಡಿ ಆದೇಶ ಹೊರಡಿಸಲಾಗಿದ್ದು, ಪ್ರಾಧಿಕಾರದ ಪತ್ರ ಸಂಖ್ಯೆ:ಬಿಎಂಐಸಿಎಪಿಎ/15/ ಭೂಉಬ/1299/2010–11/2476, ದಿನಾಂಕ:23.03.2020ರಲ್ಲಿ ತಿದ್ದುಪಡಿ ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ. ಮೇಲ್ಕಂಡ ಜಮೀನುಗಳ ಪೈಕಿ ಸರ್ವೆ ಸಂಖ್ಯೆ:173ರ 02ಎಕರೆ ಜಮೀನು ಉಳಿದ ಜಮೀನಿಗೆ ಹೊಂದಿಕೊಂಡಂತೆ ಇಲ್ಲದಿರುವುದರಿಂದ, ಸದರಿ ಜಮೀನನ್ನು ಹೊರತುಪಡಿಸಿ, ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ ಮೈಸೂರು ಉಪ ವಿಭಾಗ, ರವರು ಪತ್ರ ದಿನಾಂಕ:15.03.2021ರಲ್ಲಿ ತಿಳಿಸಿರುತ್ತಾರೆ. ಹಾಗಾಗಿ, ಸದರಿ ಜಮೀನನ್ನು ಹೊರತುಪಡಿಸಿ ಪ್ರಸ್ತಾವನೆಯನ್ನು ಪರಿಗಣಿಸಬಹುದಾಗಿದೆ.

ಪ್ರಸ್ತಾಪಿತ ಜಮೀನನ್ನು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: DMD39802AF4A76ES, ದಿನಾಂಕ:22.07.2019ರಲ್ಲಿ ಸರ್ವೆ ಸಂಖ್ಯೆ:188/1ರ 03ಎ–04ಗು, ಪತ್ರ ಸಂಖ್ಯೆ: DMD39802AF52A09C, ದಿನಾಂಕ:22.07.2019ರಲ್ಲಿ ಸರ್ವೆ ಸಂಖ್ಯೆ:188/3ರ 03ಎಕರೆ, ಪತ್ರ ಸಂಖ್ಯೆ: DMD39802AF54B110, ದಿನಾಂಕ:22.07.2019ರಲ್ಲಿ ಸರ್ವೆ ಸಂಖ್ಯೆ:189ರ 01ಎ–02ಗು, ಪತ್ರ ಸಂಖ್ಯೆ: DMD39802AF564B6E, ದಿನಾಂಕ:22.07.2019ರಲ್ಲಿ ಸರ್ವೆ ಸಂಖ್ಯೆ:286/1ರ 0ಎ–30ಗು, ಪತ್ರ ಸಂಖ್ಯೆ: DMD39802AF583479, ದಿನಾಂಕ:22.07.2019ರಲ್ಲಿ ಸರ್ವೆ ಸಂಖ್ಯೆ:286/2ರ 01ಎ–28ಗು, ಪತ್ರ ಸಂಖ್ಯೆ: DMD39802AF59C598, ದಿನಾಂಕ:22.07.2019ರಲ್ಲಿ ಸರ್ವೆ ಸಂಖ್ಯೆ:286/3ರ 02ಎ–05ಗು, ಪತ್ರ ಸಂಖ್ಯೆ:176759, ದಿನಾಂಕ:20.11.2020 ರಲ್ಲಿ ಸರ್ವೆ ಸಂಖ್ಯೆ:290/2ರ 0ಎ–32ಗು, ಪತ್ರ ಸಂಖ್ಯೆ: 176760 ದಿನಾಂಕ: 09.12.2020ರಲ್ಲಿ ಸರ್ವೆ ಸಂಖ್ಯೆ: 290/1ರ 03ಎ–389ಗು, ಪತ್ರ ಸಂಖ್ಯೆ:176757, ದಿನಾಂಕ:09.12.2020 ರಲ್ಲಿ ಸರ್ವೆ ಸಂಖ್ಯೆ: 291/1ರ 03ಎ–12ಗು, ಪತ್ರ ಸಂಖ್ಯೆ:176756, ದಿನಾಂಕ:09.12.2020 ರಲ್ಲಿ ಸರ್ವೆ ಸಂಖ್ಯೆ: 291/2ರ 02ಎ–05ಗು ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ. ಸರ್ವೆ ಸಂಖ್ಯೆ:291/2ರಲ್ಲಿ 0ಎ–01ಗು 'ಅ' ಖರಾಬನ್ನು ಭೂ ಪರಿವರ್ತನಾ ಆದೇಶದಲ್ಲಿ ಮಂಜೂರು ಮಾಡಿದ್ದು, ಆದರೆ ಸದರಿ 0ಎ–01ಗು 'ಅ' ಖರಾಬು ಭೂ ಉಪಯೋಗ ಬದಲಾವಣೆ ಆಗದೇ ಇರುವುದರಿಂದ, 0ಎ–01ಗು 'ಅ' ಖರಾಬನ್ನು ಹೊರತುಪಡಿಸಿ ಸರ್ವೆ ಸಂಖ್ಯೆ:291/2ರ 02ಎ–05ಗು ಜಮೀನಿಗೆ ಪ್ರಸ್ತಾವನೆಯನ್ನು ಪರಿಗಣಿಸಬಹುದಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ಇವರ ಪತ್ರ ಸಂಖ್ಯೆ: ವಿಭೂಸ್ವಾ(2)/ ಬಿಎಂಐಸಿಪಿ/07/2018–19, ದಿನಾಂಕ:01.08.2018ರಲ್ಲಿ "ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 173, 188/1, 188/3, 189, 286/1, 286/2, 286/3, 290/1, 290/2, 291/1, 291/2ರ ಜಮೀನುಗಳಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿ, ಕೆಐಎಡಿಬಿ, ಮೈಸೂರು ಇವರ ಪತ್ರ ಸಂಖ್ಯೆ: ಭೂಸ್ವಾ(5)ಸಿಆರ್/ /2014–15/3871, ದಿನಾಂಕ:11.12.2014ರಲ್ಲಿ "ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 173ರ 02ಎಕರೆ, 188/1ರ 03ಎ–04ಗು, 188/2ರ 03ಎಕರೆ, 189ರ 01ಎ–20ಗು, 286/1,2,3ರ ಒಟ್ಟು 04ಎ–23ಗು, 290/1ರ 0ಎ–10ಗು, 290/2ರ 04ಎ–20ಗು, 291/1ರ 03ಎ–30ಗು, 291/2ರ 01ಎ–27ಗು ಸೇರಿ ಒಟ್ಟು 23ಎ–36ಗು ವಿಸ್ತೀರ್ಣದ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಮೈಸೂರು ವಲಯ ಕಛೇರಿಯಿಂದ ಇದುವರೆವಿಗೂ ಯಾವುದೇ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಂಡಿರುವುದಿಲ್ಲ" ಎಂದು ತಿಳಿಸಿರುತ್ತಾರೆ.

ಅರ್ಜಿದಾರರು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಂದ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಹಾಗೂ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ನಿರಾಕ್ಷೇಪಣಾ ಪತ್ರಗಳನ್ನು ಪಡೆದು ಸಲ್ಲಿಸಿರುತ್ತಾರೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯ Consent for Establishment (CFE) ಸಲ್ಲಿಸಿರುವುದಿಲ್ಲ.

ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ ರವರು ಪ್ರಸ್ತಾಪಿತ ಜಮೀನುಗಳಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ಪ್ರಸ್ತಾವನೆಯನ್ನು ಹೆಚ್ಚುವರಿ ವಿಷಯವನ್ನಾಗಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸುವಂತೆ ಸೂಚಿಸಿರುತ್ತಾರೆ. ಅದರಂತೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಸರ್ಕಾರದಿಂದ ಅನುಮೋದನೆಯಾಗಿರುವ ಪ್ರಾಧಿಕಾರದ ಮಹಾಯೋಜನೆಯಲ್ಲಿ ಕೆಸರೆ ಗ್ರಾಮದ ಸರ್ವೆ ಸಂಖ್ಯೆ:188, 189, 286, 290, 291ರ ಪೂರ್ಣ ಜಮೀನುಗಳನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಮೈಅಪ್ರಾ 2018, ಬೆಂಗಳೂರು, ದಿನಾಂಕ:31.05.2019ರಲ್ಲಿ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 173ರ 02ಎಕರೆ, 188/1ರ 03ಎ–04ಗು, 188/2ರ 03ಎಕರೆ, 189ರ 01ಎ–02ಗು, 286/1ರ 0ಎ–30ಗು, 286/2ರ 01ಎ–28ಗು, 286/3ರ 02ಎ–05ಗು, 290/1ರ 0ಎ–10ಗು, 290/2ರ 04ಎ–20ಗು, 291/1ರ 03ಎ–30ಗು, 291/2ರ 01ಎ–27ಗು ಒಟ್ಟು 23ಎ–36ಗು ಜಮೀನಿಗೆ ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಸರ್ಕಾರದ ಅನುಮೋದನೆ ನೀಡಲಾಗಿದ್ದು, ಪ್ರಾಧಿಕಾರದ ಪತ್ರ ಸಂಖ್ಯೆ: ಬಿಎಂಐಸಿಎಪಿಎ/15/ಭೂಉಬ/1299/2010–11/636, ದಿನಾಂಕ:29.06.2019ರಲ್ಲಿ ಭೂ ಉಪಯೋಗ ಬದಲಾವಣೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ. ಆದರೆ, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ರವರ ಭೂ ಪರಿವರ್ತನೆ ಆದೇಶದಲ್ಲಿ ಸರ್ವೆ ಸಂಖ್ಯೆ: 291/2ರಲ್ಲಿ 0ಎ–01ಗು 'ಅ' ಖರಾಬನ್ನು ಭೂ ಪರಿವರ್ತನಾ ಆದೇಶದಲ್ಲಿ ಮಂಜೂರು ಮಾಡಿದ್ದು, ಸದರಿ 0ಎ–01ಗು 'ಅ' ಖರಾಬು ಭೂ ಉಪಯೋಗ ಬದಲಾವಣೆ ಆಗದೇ ಇರುವುದರಿಂದ, 0ಎ–01ಗು 'ಅ' ಖರಾಬನ್ನು ಪ್ರಸ್ತಾವನೆಯಿಂದ ಹೊರತುಪಡಿಸಿ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ ಮೈಸೂರು ಉಪ ವಿಭಾಗ, ರವರು ಕೋರಿರುವಂತೆ ಭೂ–ಉಪಯೋಗ ಬದಲಾವಣೆಯಾಗಿರುವ ಜಮೀನುಗಳ ಪೈಕಿ ಸರ್ವೆ ಸಂಖ್ಯೆ:173ರ 02ಎಕರೆ ಜಮೀನು ಪ್ರಸ್ತಾಪಿತ ಜಮೀನುಗಳಿಗೆ ಹೊಂದಿಕೊಂಡಂತೆ ಇಲ್ಲದಿರುವುದರಿಂದ, ಸದರಿ ಜಮೀನನ್ನು ಪ್ರಸ್ತಾವನೆಯಿಂದ ಕೈಬಿಡಲು ಸಭೆಯಲ್ಲಿ ತೀರ್ಮಾನಿಸಿ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 188/1ರ 03ಎ–04ಗು, 188/3ರ 03ಎಕರೆ, 189ರ 01ಎ–02ಗು, 286/1ರ 0ಎ–30ಗು, 286/2ರ 01ಎ–28ಗು, 286/3ರ 02ಎ–05ಗು, 290/1ರ 03ಎ–38ಗು, 290/2ರ 0ಎ–32ಗು, 291/1ರ 03ಎ–12ಗು, 291/2ರ 02ಎ–05ಗು (ಭೂ ಉಪಯೋಗ ಬದಲಾವಣೆಯಾಗದ 01ಗುಂಟೆ 'ಅ' ಖರಾಬು ಹೊರತುಪಡಿಸಿ) ಒಟ್ಟು 21ಎ–36ಗು ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಸಂಬಂಧ ಅಗತ್ಯ ಮಾಹಿತಿ/ ದಾಖಲೆಗಳನ್ನು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯ Consent for Establishment (CFE) ಅನ್ನು ಪಡೆದು, ಪ್ರಸ್ತಾಪಿತ ಜಮೀನಿನ ಸ್ಥಳ ಪರಿಶೀಲನೆ ಮಾಡಿ, ವಸತಿ ವಿನ್ಯಾಸ ನಕ್ಷೆಯನ್ನು ವಲಯ ನಿಯಮಾವಳಿಗಳನ್ವಯ ಪರಿಶೀಲಿಸಿಕೊಂಡು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ) ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

8) **ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ರವರ ಪರಿಹಾರ ನಿಧಿಗೆ ಹಣ ಬಿಡುಗಡೆ ಮಾಡುವ ಕುರಿತು**

******

ತೀರ್ಮಾನ:

ಮಾನ್ಯ ಅಧ್ಯಕ್ಷರು, ಬಿಎಂಐಸಿಎಪಿಎ ರವರು ಮಾತನಾಡಿ ಕೋವಿಡ್ –19 ಮಹಾಮಾರಿ ಸಂಬಂಧ ರಾಜ್ಯದ ಅನೇಕ ಯೋಜನಾ ಪ್ರಾಧಿಕಾರಗಳು ಹಾಗೂ ಅಭಿವೃದ್ಧಿ ಪ್ರಾಧಿಕಾರಗಳು ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಹಣ ಬಿಡುಗಡೆ ಮಾಡುತ್ತಿದ್ದು, ಈ ಪ್ರಾಧಿಕಾರದಿಂದಲೂ ಸಹ ರೂ.2.0 ಕೋಟಿಗಳನ್ನು ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಬಿಡುಗಡೆ ಮಾಡಬಹುದಾಗಿದೆ ಎಂದು ಸಭೆಗೆ ತಿಳಿಸಿದರು. ಈ ಕುರಿತು ಸದಸ್ಯ-ಕಾರ್ಯದರ್ಶಿಗಳು ಮಾತನಾಡಿ ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ರೂ.2.0 ಕೋಟಿ ಹಣ ಬಿಡುಗಡೆ ಮಾಡುವ ಸಂಬಂಧ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ. ಹಾಗಾಗಿ, ಸರ್ಕಾರದ ಅನುಮೋದನೆ ಪಡೆದ ನಂತರ ಹಣ ಬಿಡುಗಡೆ ಮಾಡಬಹುದಾಗಿದೆ ಎಂದು ಸಭೆಗೆ ತಿಳಿಸಿದರು. ಈ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ಮಾನ್ಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ರೂ.2.0 ಕೋಟಿ ಹಣ ಬಿಡುಗಡೆ ಮಾಡುವ ಸಂಬಂಧ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

26/3/2021

ಸದಸ್ಯ-ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

27/3/2021

ಅಧ್ಯಕ್ಷರು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು